28 July 2026 Tuesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಯಾರ ಮನಸ್ಸಿನಲ್ಲಿ ಅಚಲವಾದ ನಂಬಿಕೆ ಇರುವುದೋ, ಅವರ ಜೀವನದಲ್ಲಿ ಆಶ್ಚರ್ಯಕರ ಪವಾಡಗಳು ನಡೆಯುತ್ತವೆ!

-ಸ್ನೇಹಾ ಆನಂದ್

info.varthaman@gmail.com


ಇಂದು ಶ್ರೀ ಬನ್ನಿಮಹಾಕಾಳ ಅಮ್ಮನವರ ಕರಗ — ಪುಟ ಸಂ. 2


ಶುದ್ಧ ಕುಡಿಯುವ ನೀರು ಘಟಕ ಸರಿಪಡಿಸಿದ ವೈದ್ಯರು — ಪುಟ ಸಂ. 3


ನಾಳೆ ಶ್ರೀ ಚಾಮರಾಜೇಶ್ವರ ರಥೋತ್ಸವ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 237 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ವೈಭವದ ದಸರಾ ಆಚರಣೆ

## ವಿಐಪಿ ಗೋಲ್ಡ್ ಪಾಸ್‌ಗೆ 'ಗೇಟ್ ಪಾಸ್': ಸಚಿವ ಯತೀಂದ್ರ

**ಮೈಸೂರು:** ವಿಶ್ವವಿಖ್ಯಾತ ನಾಡಹಬ್ಬ ದಸರಾವನ್ನು ವೈಭವದಿಂದ ಆಚರಿಸಲು ನಿರ್ಧರಿಸಲಾಗಿದೆ. ಆದರೆ, ಈ ಬಾರಿ ವಿಐಪಿಗಳಿಗೆ ನೀಡಲಾಗುತ್ತಿದ್ದ ಉಚಿತ ಗೋಲ್ಡನ್ ಪಾಸ್ ವ್ಯವಸ್ಥೆ ನಿಷೇಧಿಸಲು ದಸರಾ ಉನ್ನತ ಸಮಿತಿ ತೀರ್ಮಾನಿಸಿದೆ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.



ನಗರದಲ್ಲಿ ಸೋಮವಾರ ನಡೆದ ದಸರಾ ಕಾರ್ಯಕಾರಿ ಸಮಿತಿ ಸಭೆ ಬಳಿಕ ಮಾತನಾಡಿದ ಅವರು, ಈ ಬಾರಿಯ ದಸರಾವನ್ನು ಇನ್ನಷ್ಟು ವೈಭವದಿಂದ ಆಯೋಜಿಸಲು ಅಗತ್ಯ ಸಿದ್ಧತೆಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ. ಈ ಬಾರಿ ಆಸನಗಳ ಸಂಖ್ಯೆಗೆ ಅನುಗುಣವಾಗಿ ಮಾತ್ರ ಗೋಲ್ಡ್ ಪಾಸ್ ಮುದ್ರಿಸಲಾಗುತ್ತದೆ. ಹಣ ಪಾವತಿಸುವ ಸಾರ್ವಜನಿಕರಿಗೆ ಮಾತ್ರ ಪಾಸ್ ನೀಡಲಾಗುವುದು. ವಿಐಪಿಗಳಿಗೆ ಉಚಿತ ಗೋಲ್ಡ್ ಪಾಸ್ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು ದಸರಾ ಯಶಸ್ವಿ ಆಯೋಜನೆಗೆ 17 ಉಪಸಮಿತಿಗಳನ್ನು ರಚಿಸಲಾಗಿದೆ. ಕಾರ್ಯಾಧ್ಯಕ್ಷರಿಗೆ ಜವಾಬ್ದಾರಿ ವಹಿಸಲಾಗಿದೆ. ಈ ಬಾರಿ ಡ್ರೋನ್ ಶೋವನ್ನು ಮತ್ತಷ್ಟು ವಿನೂತನವಾಗಿ ಆಯೋಜಿಸಲಾಗುವುದು. ಕೇಂದ್ರ ಸರ್ಕಾರದ ಅನುಮತಿ ದೊರೆತರೆ ಏರ್ ಶೋ ನಡೆಸುವ ಪ್ರಯತ್ನ ನಡೆಯುತ್ತಿದೆ ಎಂದರು. ಸಭೆಯಲ್ಲಿ ಶಾಸಕರಾದ ಕೆ.ಹರೀಶಗೌಡ, ಜಿ.ಡಿ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ, ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಕೆ.ವಿವೇಕನಂದ, ಸಿ.ಎನ್ ಮಂಜೇಗೌಡ, ಕೌಟಿಲ್ಯ ರಘು, ಗ್ಯಾರಂಟಿ ಯೋಜನೆ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಇದ್ದರು.



### ದಸರಾ ಉದ್ಘಾಟಕರ ಆಯ್ಕೆ ಸಿಎಂ ನಿರ್ಧಾರ

**ಮೈಸೂರು:** ನಾಡಹಬ್ಬ ದಸರಾ ಉದ್ಘಾಟಕರನ್ನು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಆಯ್ಕೆಗೆ ಬಿಡಲಾಗಿದೆ. ಅವರ ನಿರ್ಧಾರವೇ ಅಂತಿಮ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.



ನಗರದಲ್ಲಿ ಸೋಮವಾರ ದಸರಾ ಸಿದ್ಧತಾ ಸಭೆ ನಡೆಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾವೆಲ್ಲರೂ ಉದ್ಘಾಟಕರ ಆಯ್ಕೆಯನ್ನು ಅವರಿಗೆ ಬಿಟ್ಟಿದ್ದೇವೆ. ಶಾಸಕರು ಒಂದಷ್ಟು ಸಲಹೆ ಕೊಟ್ಟಿದ್ದಾರೆ. ಯಾವುದೇ ಹೆಸರನ್ನು ಆಯ್ಕೆ ಮಾಡಿದರೂ ಸರಿ. ಆದರೆ ಸಾಮಾಜಿಕ ಜಾಲತಾಣದಲ್ಲಿ ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್ ಹೆಸರು ಮುಂಚೂಣಿಯಲ್ಲಿದೆ ಎಂದರು.

ಈ ಬಾರಿ ದಸರಾದಲ್ಲಿ 17 ಉಪ ಸಮಿತಿಗಳನ್ನು ರಚನೆ ಮಾಡಲು ನಿರ್ಧಾರ ಮಾಡಿದ್ದೇವೆ. ದಸರಾದಲ್ಲಿ ಕಂಬಳ ನಡೆಸುವ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ. ಕಂಬಳ ಫೈನಲ್ ಆದರೆ ಇನ್ನೊಂದು ಉಪಸಮಿತಿ ಆಗುತ್ತದೆ. ಕಂಬಳ ಮಾಡಿದರೆ ಸಾತಗಳ್ಳಿಯಲ್ಲೇ ಮಾಡ್ತಾರೆ. ಆದರೆ ಸಿಎಂ ಇನ್ನೂ ಆ ಬಗ್ಗೆ ಫೈನಲ್ ಮಾಡಿಲ್ಲ. ಎಲ್ಲವೂ ಕೂಡ ಅವರ ಕೈನಲ್ಲಿ ಇದೆ ಎಂದರು.

> ದಸರಾ ಸಂದರ್ಭದಲ್ಲಿ ಹೆಚ್ಚಿನ ಪ್ರವಾಸಿಗರು ಆಗಮಿಸುವ ಹಿನ್ನಲೆಯಲ್ಲಿ ಹೋಟೆಲ್‌ಗಳಲ್ಲಿ ಕೃತಕ ಬೇಡಿಕೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ಲೈಟಿಂಗ್ ವೀಕ್ಷಣೆ ಮಾಡಲು ದರ ನಿಗದಿ ಮಾಡಿ ವಿಶೇಷ ಟಾಂಗಾ ವ್ಯವಸ್ಥೆ ಮಾಡಬೇಕು. ಗೋಲ್ಡ್ ಪಾಸ್ ಪಡೆದವರಿಗೆ ಕಿರಿಕಿರಿಯಾಗದಂತೆ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಬೇಕು.
>
> ▸▸ **ತನ್ವೀರ್ ಸೇಠ್** ಶಾಸಕ

> ಬುಡಕಟ್ಟು ಜನರಿಗೆ ದಸರಾ ದೀಪಾಲಂಕಾರ, ಚಾಮುಂಡಿಬೆಟ್ಟ, ಫ್ಲವರ್ ಶೋ ವೀಕ್ಷಿಸಲು ಒಂದು ದಿನ ವಿಶೇಷ ಅವಕಾಶ ನೀಡಬೇಕು. ದಸರಾ ಸಂದರ್ಭದಲ್ಲಿ ಕಬಿನಿ ಉತ್ಸವ ಆಚರಿಸಿ.
>
> ▸▸ **ಅನಿಲ್ ಚಿಕ್ಕಮಾದು** ಶಾಸಕ

# ಮೇಕೆದಾಟುಗೆ ಸಮ್ಮತಿ ಬೇಕಿಲ್ಲ

### ಸಂಸತ್‌ನಲ್ಲಿ ತಮಿಳುನಾಡು ಪ್ರಶ್ನೆಗೆ ಕೇಂದ್ರ ಸರ್ಕಾರದ ಉತ್ತರ





**ನವದೆಹಲಿ:** ಕರ್ನಾಟಕ ರಾಜ್ಯದ ಮೇಕೆದಾಟು ಯೋಜನೆಗೆ ತಮಿಳುನಾಡು ಸಮ್ಮತಿ ಪಡೆಯಬೇಕಾದ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯಸಭೆಯಲ್ಲಿ ತಮಿಳುನಾಡು ಸಂಸದ ಅನ್ಬುಮಣಿ ರಾಮದಾಸ್ ಅವರು ಕೇಳಿದ ಪ್ರಶ್ನೆಗೆ ಜಲಶಕ್ತಿ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ ಲಿಖಿತ ಉತ್ತರ ನೀಡಿದ್ದಾರೆ.

ಕಾವೇರಿ ನದಿ ನೀರು ವಿವಾದಕ್ಕೆ ಸಂಬಂಧಿಸಿದಂತೆ 2018ರಲ್ಲಿ ನೀಡಲಾದ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ, ಕಾವೇರಿ ನದಿಗೆ ಅಡ್ಡಲಾಗಿ ಯಾವುದೇ ನಿರ್ಮಾಣ ಕಾರ್ಯ ಕೈಗೊಳ್ಳಲು ಕರ್ನಾಟಕವು ತಮಿಳುನಾಡು, ಕೇರಳ ಅಥವಾ ಪುದುಚೇರಿಯಿಂದ ಅನುಮತಿ/ಸಮ್ಮತಿ ಪಡೆಯಬೇಕು ಎಂದು ಎಲ್ಲಿಯೂ ಉಲ್ಲೇಖಿಸಿಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸಂಸತ್ತಿನಲ್ಲಿ ಸ್ಪಷ್ಟಪಡಿಸಿದೆ.

ಕಾವೇರಿ ನದಿಗೆ ಅಡ್ಡಲಾಗಿ ಯಾವುದೇ ರೀತಿಯ ರಚನೆಯನ್ನು ನಿರ್ಮಿಸಲು ತಮಿಳುನಾಡು, ಕೇರಳ

#### 'ಸುಪ್ರೀಂ' ತೀರ್ಪಿನಲ್ಲೂ ತಿಳಿಸಿಲ್ಲ

ಕಾವೇರಿ ನದಿಗೆ ಅಡ್ಡಲಾಗಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಮೇಲ್ಭಾಗದ ರಾಜ್ಯವಾದ ಕರ್ನಾಟಕ ಕೆಳಭಾಗದ ರಾಜ್ಯಗಳ ಅನುಮತಿ ಪಡೆಯುವುದು ಕಡ್ಡಾಯ ಎಂದು 2018ರ ಫೆಬ್ರವರಿ 16ರ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿಯೂ ಉಲ್ಲೇಖವಾಗಿಲ್ಲ.

2007ರ ಕಾವೇರಿ ನೀರು ವಿವಾದ ನ್ಯಾಯಾಧಿಕರಣದ ತೀರ್ಪಿನ 18ನೇ ವಿಧಿಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಇದರ ಪ್ರಕಾರ, ನ್ಯಾಯಾಧಿಕರಣದ ಆದೇಶಕ್ಕೆ ಧಕ್ಕೆಯಾಗದಂತೆ ತಮ್ಮ ಗಡಿಭಾಗದ ವ್ಯಾಪ್ತಿಯಲ್ಲಿ ನೀರಿನ ಬಳಕೆ ಅಥವಾ ಸೌಲಭ್ಯವನ್ನು ನಿಯಂತ್ರಿಸುವ ಹಕ್ಕು ಆಯಾ ರಾಜ್ಯಗಳಿಗೆ ಸೇರಿದೆ.

ಕರ್ನಾಟಕ ಸರ್ಕಾರ 2019ರಲ್ಲಿ ಸಲ್ಲಿಸಿದ್ದ ಮೇಕೆದಾಟು

# ಸಿದ್ದರಾಮಯ್ಯ ದೃಢ ನಿರ್ಧಾರ

### ಚುನಾವಣೆಗೆ ನಿಲ್ಲುವಂತೆ ಮನವೊಲಿಸಲ್ಲ: ಯತೀಂದ್ರ

**ಮೈಸೂರು:** ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿರುವ ಸಿದ್ದರಾಮಯ್ಯ ನಿರ್ಧಾರ ದೃಢವಾಗಿದೆ ಎಂದು ಅವರ ಪುತ್ರ, ಸಚಿವ ಯತೀಂದ್ರ ತಿಳಿಸಿದ್ದಾರೆ.



ನಗರದಲ್ಲಿ ಸೋಮವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಒಬ್ಬ ಮಗನಾಗಿ ಅವರನ್ನು ಮನವೊಲಿಸುವ ಉದ್ದೇಶ ನನಗೆ ಇಲ್ಲ. ಅವರಿಗೆ 80 ವರ್ಷ ವಯಸ್ಸಾಗಿದೆ. ತಮ್ಮ ಆರೋಗ್ಯಕ್ಕೆ ಆದ್ಯತೆ ನೀಡುವುದಾಗಿ ಹೇಳಿದ್ದಾರೆ ಎಂದು ಯತೀಂದ್ರ ತಿಳಿಸಿದ್ದಾರೆ.

ಸಿದ್ದರಾಮಯ್ಯ ಬೆಂಬಲಿಗರು ನಿವೃತ್ತಿ ನಿರ್ಧಾರವನ್ನು ಮರುಪರಿಶೀಲಿಸುವಂತೆ ಒತ್ತಡ ಹಾಕುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಯತೀಂದ್ರ, ಚುನಾವಣಾ ರಾಜಕೀಯದಿಂದ ನಿವೃತ್ತಿ ಪಡೆದರೂ ಸಕ್ರಿಯ ರಾಜಕೀಯದಲ್ಲಿ ಮುಂದುವರಿಯುತ್ತಾರೆ. ಸಮಾಜದ ಶೋಷಿತ ಹಾಗೂ ದುರ್ಬಲ ವರ್ಗಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುತ್ತಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರು 2028ರ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದಾರೆ. ಅವರ ವಯಸ್ಸು ಮತ್ತು ತೀವ್ರವಾಗಿ ಕಲುಷಿತಗೊಂಡಿರುವ ರಾಜಕೀಯವನ್ನು ಉಲ್ಲೇಖಿಸಿದ್ದಾರೆ.

#### ಸಾಲಕ್ಕೆ ವಾಪಸ್‌ಗೆ ಪೀಡಿಸುವಂತಿಲ್ಲ

ಬರಗಾಲ ಇರುವುದರಿಂದ ಯಾವುದೇ ಫೈನಾನ್ಸ್ ಕಂಪನಿಗಳು ರೈತರನ್ನು ಪೀಡಿಸಬಾರದು ಎಂದು ಈಗಾಗಲೇ ಕಾನೂನು ತಂದಿದ್ದೇವೆ. ನೋಟಿಸ್ ಕೊಟ್ಟಿದ್ದರೆ ಅದನ್ನು ಸರ್ಕಾರ ಗಮನಕ್ಕೆ ತರುತ್ತೇನೆ ಎಂದು ಯತೀಂದ್ರ ಹೇಳಿದರು.

# ಪರೀಕ್ಷೆ ಅಕ್ರಮ ತಡೆ ಮಸೂದೆ

### ಲೋಕಸಭೆಯಲ್ಲಿ ವಿಪಕ್ಷಗಳ ಗದ್ದಲದ ನಡುವೆಯೂ ಮಂಡನೆ

**ನವದೆಹಲಿ:** ನೀಟ್ ಪರೀಕ್ಷೆ ಅಕ್ರಮ ಖಂಡಿಸಿ ವಿದ್ಯಾರ್ಥಿಗಳ ಆಂದೋಲನ ಸಂದರ್ಭದಲ್ಲಿ ಪೊಲೀಸರ ದೌರ್ಜನ್ಯ ಖಂಡಿಸಿ ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೇ ಸರ್ಕಾರ ಸೋಮವಾರ ಲೋಕಸಭೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳಲು ಅನುವು ಮಾಡಿಕೊಡುವ ಮಸೂದೆಯನ್ನು ಮಂಡಿಸಿತು.



ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಸಾರ್ವಜನಿಕ ಪರೀಕ್ಷೆಗಳು (ಅಕ್ರಮ ತಡೆಗಟ್ಟುವಿಕೆ) ತಿದ್ದುಪಡಿ ಮಸೂದೆಯನ್ನು ಮಂಡಿಸಿದ ಕೂಡಲೇ, ವಿರೋಧ ಪಕ್ಷದ ನಿರಂತರ ಪ್ರತಿಭಟನೆಗಳಿಂದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಸದನವನ್ನು ಮಧ್ಯಾಹ್ನ 2 ಗಂಟೆಯವರೆಗೆ ಮುಂದೂಡಿದರು.

ಸಿಜೆಪಿ ನೇತೃತ್ವದಲ್ಲಿ ಜುಲೈ 20ರಂದು ಸಂಸತ್ತಿಗೆ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳ ಮೇಲೆ ಪೊಲೀಸ್ ದೌರ್ಜನ್ಯದ ಬಗ್ಗೆ ವಿಪಕ್ಷ ನಾಯಕರು ಸರ್ಕಾರ ಪ್ರತಿಕ್ರಿಯೆ ನೀಡಬೇಕೆಂದು ಆಗ್ರಹಿಸಿದರು.

2 ವರ್ಷ ಹಳೆಯ ಪ್ರಶ್ನೆ ಪತ್ರಿಕೆ ಸೋರಿಕೆ ನಿಗ್ರಹ ಕಾನೂನನ್ನು ತಿದ್ದುಪಡಿ ಮಾಡಲು ಕೋರಿ, ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಇತರ ವಿಷಯಗಳ ಕುರಿತು ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯ ನಂತರ ಮಸೂದೆಯನ್ನು ಪರಿಚಯಿಸಲಾಗಿದೆ. ಆರೋಪಿಗಳ ತ್ವರಿತ ವಿಚಾರಣೆಗಾಗಿ ಪ್ರತಿ ರಾಜ್ಯದಲ್ಲೂ ತ್ವರಿತ ನ್ಯಾಯಾಲಯ ಸ್ಥಾಪಿಸಲು ಮತ್ತು ಶಿಕ್ಷೆಯನ್ನು ಹೆಚ್ಚಿಸುವುದನ್ನು ಮಸೂದೆಯು ಪ್ರಸ್ತಾಪಿಸುತ್ತದೆ.

ಸಾರ್ವಜನಿಕ ಪರೀಕ್ಷೆಗಳು ಪುಟ 2ಕ್ಕೆ

# ಈ ವಾರ ಸಂಪುಟ ವಿಸ್ತರಣೆ

### ಶೀಘ್ರವೇ ಸರ್ವಪಕ್ಷ ಸಭೆ ಕರೆದು ಚರ್ಚೆ: ಸಿಎಂ ಡಿಕೆಶಿ

**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆ ಈ ವಾರದೊಳಗೆಪೂರ್ಣಗೊಳ್ಳಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ದೆಹಲಿಗೆ ಪ್ರಯಾಣ ಬೆಳೆಸುವ ಮೊದಲು ತಮ್ಮ ನಿವಾಸದ ಬಳಿ ಸುದ್ದಿಗಾರರ ಜೊತೆ ಅವರು ಮಾತನಾಡಿದರು. ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕೇಳಿದಾಗ, ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ನೀವೇ (ಮಾಧ್ಯಮಗಳು) ಆತುರದಲ್ಲಿದ್ದೀರಿ ಎಂದರು.

ದೆಹಲಿಯಲ್ಲಿ ನಮ್ಮ ಸಂಸತ್ ಸದಸ್ಯರನ್ನು ಭೇಟಿ ಮಾಡುತ್ತಿದ್ದೇನೆ. ಅವರಿಗೆ ರಾಜ್ಯದ ಬರ ಪರಿಸ್ಥಿತಿ, ನೀರಿನ ಪರಿಸ್ಥಿತಿ, ಕಾವೇರಿ, ಮಹದಾಯಿ, ಮೇಕೆದಾಟು, ಕೃಷ್ಣ ಸೇರಿದಂತೆ ಅನೇಕ ನೀರಾವರಿ ಯೋಜನೆಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗಿದೆ ಎಂದರು.

ನಾನು ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ಯಾವ ವಿಚಾರದಲ್ಲಿ ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗಬೇಕು ಎಂದು ಸಂಸದರಿಗೆ ಮನವಿ ಮಾಡಲು ಹೋಗುತ್ತಿದ್ದೇನೆ. ನಂತರ ಬೆಂಗಳೂರಿನಲ್ಲಿ ಸರ್ವಪಕ್ಷ ಸಭೆ ಕರೆಯಲಾಗುವುದು. ರಾಜ್ಯದ ಹಿರಿಯ ನಾಯಕರ ಜೊತೆಗೂ ಪ್ರಮುಖ ವಿಚಾರಗಳನ್ನು ಚರ್ಚಿಸಲಾಗುವುದು ಎಂದು ತಿಳಿಸಿದರು. ಪುಟ 2ಕ್ಕೆ



# ಹೆದ್ದಾರಿಗೆ ಉರುಳಿದ ಬೃಹತ್ ಟ್ಯಾಂಕರ್



**ಮಂಡ್ಯ:** ಬಾಯ್ಲರ್ ಟ್ಯಾಂಕ್ ಹೊತ್ತೊಯ್ಯುತ್ತಿದ್ದ ಬೃಹತ್ ಲಾರಿ ಮರಕ್ಕೆ ಡಿಕ್ಕಿಯಾಗಿ ಬಾಯ್ಲರ್ ರಸ್ತೆಗೆ ಉರುಳಿಬಿದ್ದ ಘಟನೆ ಕೆ.ಆರ್.ಪೇಟೆ ತಾಲೂಕಿನ ಮುರುಕನಹಳ್ಳಿ ಸಮೀಪ ಮೈಸೂರು –ಚನ್ನರಾಯಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ನಡೆದಿದೆ.

ರಾಜಸ್ಥಾನದಿಂದ ನಂಜನಗೂಡು ಕೈಗಾರಿಕಾ ಪ್ರದೇಶಕ್ಕೆ ಬಾಯ್ಲರ್ ಟ್ಯಾಂಕ್ ಅನ್ನು ಸಾಗಿಸಲಾಗುತ್ತಿತ್ತು. ಮುರುಕನಹಳ್ಳಿ ಬಳಿ ಲಾರಿಯಲ್ಲಿದ್ದ ಬಾಯ್ಲರ್ ಟ್ಯಾಂಕ್ ರಸ್ತೆ ಬದಿ ಮರಕ್ಕೆ ತಗುಲಿದ ಪರಿಣಾಮ ಹೆದ್ದಾರಿಗೆ ಅಡ್ಡಲಾಗಿ ಉರುಳಿದೆ. ಇದರಿಂದ ಮೈಸೂರು–ಚನ್ನರಾಯಪಟ್ಟಣ ರಾಜ್ಯ ಹೆದ್ದಾರಿ ಸಂಚಾರ ಕೆಲಕಾಲ ಸಂಪೂರ್ಣ ಸ್ತಬ್ಧವಾಯಿತು.

# ಎ ಖಾತೆಗೆ ಅವಧಿ ವಿಸ್ತರಣೆ

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಬಿ ಖಾತೆದಾರರು ಹೊಸದಾಗಿ ಎ ಖಾತಾ ಪಡೆಯಲು ವಿಧಿಸಲಾಗುತ್ತಿರುವ ಬೆಟರ್‌ಮೆಂಟ್ ಲೆವಿಯನ್ನು ಮಾರ್ಗಸೂಚಿ ಮೌಲ್ಯದ ಶೇ.5ರಿಂದ ಶೇ.2ಕ್ಕೆ ಇಳಿಸಿ ನೀಡಿರುವ ರಿಯಾಯಿತಿಯನ್ನು ಆಗಸ್ಟ್ 23ರವರೆಗೆ ಸರ್ಕಾರ ವಿಸ್ತರಿಸಿದೆ.




ನಗರಾಭಿವೃದ್ಧಿ ಇಲಾಖೆ ಪರಿಷ್ಕೃತ ಆದೇಶ ಹೊರಡಿಸಿದ್ದು, ಏಕ ಗವಾಕ್ಷಿ ವ್ಯವಸ್ಥೆಯಡಿ ಹೊಸ ಎ ಖಾತಾ ಪಡೆಯಲು ಸಲ್ಲಿಸುವ ಅರ್ಜಿಗಳಿಗೆ ಆಗಸ್ಟ್ 23ರವರೆಗೆ ಶೇ.2ರ ಬೆಟರ್‌ಮೆಂಟ್ ಲೆವಿ ಅನ್ವಯವಾಗಲಿದೆ.

ಜಿಬಿಎ ಅಂದಾಜಿನ ಪ್ರಕಾರ ಸುಮಾರು ಐದು ಲಕ್ಷ ಆಸ್ತಿಗಳು ಹೊಸ ಎ–ಖಾತಾಗೆ ಅರ್ಹವಾಗಿವೆ. ಆದರೆ ಇಲ್ಲಿಯವರೆಗೆ ಸುಮಾರು 7,000 ಅರ್ಜಿಗಳು ಮಾತ್ರ ಬಂದಿವೆ. ಹೀಗಾಗಿ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಲಾಗಿದೆ. ಅವಧಿ ಮುಗಿದ ನಂತರ ಶೇ 5ರಷ್ಟು ಮೂಲ ಅಭಿವೃದ್ಧಿ ಶುಲ್ಕವನ್ನೇ ಪಾವತಿಸಬೇಕಾಗುತ್ತದೆ.

# ಕಾಡು ಹಂದಿ ಬೇಟೆ: ಗುಂಡೇಟು, ಬಂಧನ

**ಚಾಮರಾಜನಗರ:** ಮಲೆ ಮಹದೇಶ್ವರ ವನ್ಯಧಾಮದಲ್ಲಿ ಕಾಡುಹಂದಿಗಳನ್ನು ಬೇಟೆಯಾಡಿ ಕೊಂಡೊಯ್ಯುತ್ತಿದ್ದ ಆರೋಪಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಗುಂಡೇಟು ಹಾಕಿ ಬಂಧಿಸಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರಪೇಟೆಯ ಕಾಥೇರಿ ಗ್ರಾಮದ ಅನ್ವಿತ್ ಬಂಧಿತ ಆರೋಪಿ. ಈತನ ಜೊತೆಗೆ ಬಂದಿದ್ದ ಮೂವರು ಪರಾರಿಯಾಗಿದ್ದಾರೆ. ದರ್ಶನ್, ಮಂಜು ಮತ್ತು ಕಿರಣ್ ಪರಾರಿಯಾದ ಆರೋಪಿಗಳು.

ಅರಣ್ಯ ಸಿಬ್ಬಂದಿ ಕಾರು ಅಡ್ಡಗಟ್ಟಿ ತಪಾಸಣೆ ನಡೆಸುವ ವೇಳೆ ಪ್ರಕರಣ ಬಯಲಿಗೆ ಬಂದಿದೆ. ಕಾರು ಅಡ್ಡಗಟ್ಟುತ್ತಿದ್ದಂತೆ ಆರೋಪಿಗಳು ಪರಾರಿಗೆ ಯತ್ನಿಸಿದ್ದಾರೆ. ಈ ವೇಳೆ ಓರ್ವನಿಗೆ ಗುಂಡೇಟು ನೀಡಿ ಬಂಧಿಸಲಾಗಿದೆ. ಪರಾರಿಯಾದವರಿಗಾಗಿ ಶೋಧ ನಡೆಯುತ್ತಿದೆ. ಎರಡು ಕಾಡುಹಂದಿ, ಒಂದು ಮಚ್ಚು, ಮೊಬೈಲ್ ಹಾಗೂ ಆಲ್ಟೋ ಕಾರನ್ನು ವಶಕ್ಕೆ ಪಡೆಯಲಾಗಿದೆ.



# ಸಾಹುಕರ್ ಮಗಳಿಗೆ ಹೈಕೋರ್ಟ್ ತರಾಟೆ

**ಬೆಂಗಳೂರು:** ಕೆಪಿಎಸ್‌ಸಿ ಹುದ್ದೆ ನೇಮಕಾತಿಗೆ ಸುಳ್ಳು ಪ್ರಮಾಣಪತ್ರ ಸಲ್ಲಿಕೆ ಆರೋಪ ಪ್ರಕರಣ ರದ್ದುಗೊಳಿಸುವಂತೆ ಅರ್ಜಿ ಸಲ್ಲಿಸಿದ್ದ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಪುತ್ರಿ ಸುಮಾ ಸಾಹುಕಾರ್‌ಗೆ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಸೋಮವಾರ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಪುಟ 2ಕ್ಕೆ




# ಅಧಿಕಾರಿಗಳೊಂದಿಗೆ ಸಿಎಂ ಸಭೆ

**ನವದೆಹಲಿ:** ಮೇಕೆದಾಟು, ಮಹದಾಯಿ ಸೇರಿದಂತೆ ರಾಜ್ಯದ ಕುಡಿಯುವ ನೀರು, ಜಲಸಂಪನ್ಮೂಲ ಯೋಜನೆಗಳ ಸ್ಥಿತಿಗತಿ, ರಾಜ್ಯದ ಜಲಾಶಯಗಳಲ್ಲಿನ ನೀರಿನ ಪರಿಸ್ಥಿತಿ ಮತ್ತಿತರ ವಿಚಾರಗಳ ಬಗ್ಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾನೂನು ಮತ್ತು ಜಲ ಸಂಪನ್ಮೂಲ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ದೆಹಲಿ ಪುಟ 2ಕ್ಕೆ




# 'ಸುಪ್ರೀಂ ಅಂಗಳಕ್ಕೆ' ಆನ್‌ಲೈನ್ ನೀಟ್

**ನವದೆಹಲಿ:** ವೈದ್ಯಕೀಯ ಪ್ರವೇಶ ಪರೀಕ್ಷೆಯನ್ನು (ನೀಟ್) ಆನ್‌ಲೈನ್ ಮೂಲಕ ನಡೆಸುವ ಕುರಿತು ಕೇಂದ್ರ ಸರ್ಕಾರ ರಚಿಸಿರುವ ನಂದನ್ ನೀಲೇಕಣಿ ನೇತೃತ್ವದ ಉನ್ನತ ಮಟ್ಟದ ಕಾರ್ಯಪಡೆ ಶಿಫಾರಸುಗಳನ್ನು ಪರಿಶೀಲಿಸಿದ ಬಳಿಕ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಅರಾಧೆ ಅವರಿದ್ದ ಪೀಠ, ಭೌತಿಕ (ಆಫ್‌ಲೈನ್) ಪರೀಕ್ಷಾ ಪದ್ಧತಿಯಿಂದ ಆನ್‌ಲೈನ್ ಪರೀಕ್ಷೆಗೆ ಬದಲಾವಣೆ ಮಾಡುವ ಸಂದರ್ಭದಲ್ಲಿ ಹೊಸ ಹಾಗೂ ಪರಿಣಾಮಕಾರಿ ಕ್ರಮಗಳ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿತು.

ಸೈಬರ್ ಭದ್ರತೆ, ಡೇಟಾಬೇಸ್ ರಕ್ಷಣೆ ಸೇರಿದಂತೆ ಕೆಲವು ಹೆಚ್ಚುವರಿ ಸುರಕ್ಷತಾ ಕ್ರಮಗಳು ಅಗತ್ಯ. ಈ ವಿಷಯದಲ್ಲಿ ಸಾಂಪ್ರದಾಯಿಕ ಚಿಂತನೆಯಾಚೆಗೆ ಹೋಗಿ ಪುಟ 2ಕ್ಕೆ



#### ಸಮಿತಿಯಲ್ಲಿ ಯಾರಿದ್ದಾರೆ?

ಇನ್ಫೋಸಿಸ್ ಸಹ ಸಂಸ್ಥಾಪಕ ಹಾಗೂ ಆಧಾರ್ ಮುಖ್ಯಸ್ಥರಾಗಿದ್ದ ನಂದನ್ ನೀಲೇಕಣಿ ಈ ಕಾರ್ಯಪಡೆಯ ಮುಖ್ಯಸ್ಥರಾಗಿದ್ದಾರೆ. ಈ ತಂಡದಲ್ಲಿ ಮಾಜಿ ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್, ಗುಪ್ತಚರ ದಳದ ಮಾಜಿ ನಿರ್ದೇಶಕ ತಪನ್ ಡೇಕಾ, ಐಐಟಿ ಮದ್ರಾಸ್ ನಿರ್ದೇಶಕ ವಿ.ಕಾಮಕೋಟಿ, ಮಾಜಿ ಶಿಕ್ಷಣ ಕಾರ್ಯದರ್ಶಿ ಅನಿತಾ ಕರ್ವಾಲ್ ಮತ್ತು ಲಾಜಿಸ್ಟಿಕ್ಸ್ ತಜ್ಞ ಅಮೃತ್ ಲಾಲ್ ಮೀನಾ ಇದ್ದಾರೆ.

#### 'ಲಾಠಿ ಏಟಿಗೆ ಲೆಕ್ಕ ಕೊಡಿ': ಕಾಂಗ್ರೆಸ್ ನಾಯಕರ ಪ್ರತಿಭಟನೆ

**ನವದೆಹಲಿ:** ಬಿಜೆಪಿ ಸಂಸದ ಧರ್ಮೇಂದ್ರ ಪ್ರಧಾನ್ ಅವರು ಸಂಸತ್ತಿನ ಪುಟ 2ಕ್ಕೆ

# ರಾಮನಗರದಲ್ಲಿಂದು ಶ್ರೀ ಬನ್ನಿಮಹಾಕಾಳಿ ಅಮ್ಮನವರ ಕರಗ

ರಾಮನಗರ: ನಗರ ಪ್ರಧಾನ ದೇವತೆ ಶ್ರೀ ಬನ್ನಿಮಹಾಕಾಳಿ ಅಮ್ಮನವರ ಕರಗ ಇಂದು ಜುಲೈ 28ರ ಮಂಗಳವಾರ ಕರಗ ಮಹೋತ್ಸವ ನಡೆಯಲಿದೆ, ಜು.29ರ ಬುಧವಾರ ಬೆಳಿಗ್ಗೆ ಅಗ್ನಿಕೊಂಡ ಮಹೋತ್ಸವ ನಡೆಯಲಿದೆ.

ನಗರದ ಮಂಡಿಪೇಟೆಯಲ್ಲಿರುವ ದೇವಾಲಯದಲ್ಲಿ ಕಳೆದೊಂದು ವಾರದಿಂದ ಕರಗ ಮಹೋತ್ಸವದ ಪ್ರಯುಕ್ತ ಧಾರ್ಮಿಕ ವಿಧಿವಿಧಾನಗಳು ನಡೆಯುತ್ತಿವೆ. ಮಂಗಳವಾರ ಸಂಜೆ ಕರಗ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಭಕ್ತರಿಂದ ಪೂಜೆ ಸ್ವೀಕರಿಸಿದ ನಂತರ ಬುಧವಾರ ಬೆಳಿಗ್ಗೆ ದೇವಾಲಯದ ಬಳಿ ತತ್ಕಾಲಿಕವಾಗಿ ನಿರ್ಮಿಸಿರುವ ಅಗ್ನಿಕೊಂಡವನ್ನು ಹಾಯುವ ಮೂಲಕ ಪ್ರಸಕ್ತ ಸಾಲಿನ ಕರಗ ಮಹೋತ್ವದ ಪ್ರಮುಖ ಘಟ್ಟ ಪೂರ್ಣಗೊಳ್ಳಲಿದೆ.

**ರಾಮನಗರಕ್ಕೆ ಬನ್ನಿ ಮಹಾಂಕಾಳಿ ಕರಗವೇ ಪ್ರಥಮ,**

ರಾಮನಗರದಲ್ಲಿ ಬನ್ನಿ ಮಹಾಕಾಳಿ ಅಮ್ಮನವರ ಕರಗವೇ ಮೊದಲು ಆರಂಭವಾಗಿದೆ. ಈಗ ನಗರದಲ್ಲಿ

ಒಂಬತ್ತು ಕರಗಗಳ ಉತ್ಸವ ನಡೆಯುತ್ತದೆ. 'ಆದರೆ ಈಗ ರಾಮನಗರ ನಗರ ವ್ಯಾಪ್ತಿ ಹೆಚ್ಚಾಗಿ ಬೆಳೆದಿದೆ, ಬೆಳೆಯುತ್ತಿದೆ. ಹೀಗಾಗಿ, ಈಗ ರಾತ್ರಿ 10 ಗಂಟೆಗೆ ಕರಗ ದೇವಾಲಯದಿಂದ ಹೊರಟರೆ ಮರುದಿನ ಬೆಳಿಗ್ಗೆ ದೇವಾಲಯದ ಬಳಿ ನಿರ್ಮಿಸುವ ಅಗ್ನಿಕೊಂಡವನ್ನು ಹಾಯುತ್ತದೆ.



## 400 ವರ್ಷಗಳ ಇತಿಹಾಸ

ನಾನೂರು ವರ್ಷಗಳ ಹಿಂದೆ ಮೈಸೂರು ರಾಜರ ಆಸ್ಥಾನದಲ್ಲಿದ್ದ ಭಕ್ತಿ ಬಾಲಾಜಿ ಅವರು ಕೊಲ್ಲಾಪುರಕ್ಕೆ ಹೋಗಿದ್ದ ಸಂದರ್ಭದಲ್ಲಿ ರಾತ್ರಿಯ ವೇಳೆಯಲ್ಲಿ ಅವರಿಗೆ ಕನಸೊಂದು ಬಿದ್ದಿತ್ತು. ಅವರ ಕನಸಿನಲ್ಲಿ ದೇವಿಯು ಕಾಣಿಸಿಕೊಂಡು ತನಗೊಂದು ನೆಲೆ ನಿರ್ಮಿಸುವಂತೆ ಆದೇಶಿಸಿದಳು.

ಇದರಿಂದ ಸಂತೋಷಗೊಂಡ ಅವರು ಎಲ್ಲಿ ಎಂದು ಕೇಳಲಾಗಿ ದೇವಿಯು 'ನಾನು ನಿನ್ನ ಬಂಡಿಯ ಹಿಂದೆ ಬರುತ್ತೇನೆ. ಎಲ್ಲಿ ನನ್ನ ಗೆಜ್ಜೆಯ ನಾದ ನಿಲ್ಲುತ್ತದೆಯೋ ಅಲ್ಲಿ ನನಗೆ ಗುಡಿಯನ್ನು ಕಟ್ಟಿಸು' ಎಂದು ತಿಳಿಸಿದಳು.

ಕೊಲ್ಲಾಪುರದಿಂದ ಮೈಸೂರಿಗೆ ಎತ್ತಿನ ಬಂಡಿಯಲ್ಲಿ ಹಿಂದಿರುಗುವಾಗ ಎತ್ತಿನ ಬಂಡಿಯ ಹಿಂದೆ ಬರುತ್ತಿದ್ದ ಗೆಜ್ಜೆಯ ನಾದ ಅಂದಿನ ಕ್ಲೋಸ್ ಪೇಟೆ ಬಳಿಯಲ್ಲಿದ್ದ ಬನ್ನಿ ಮರದ ಕೆಳಗೆ ನಿಂತಿತು. ಈ ಸ್ಥಳದಲ್ಲಿ ತನ್ನನ್ನು ಪ್ರತಿಷ್ಠಾಪನೆ ಮಾಡುವಂತೆ ದೇವಿಯು ಭಕ್ತಿ ಬಾಲಾಜಿ ಅವರಿಗೆ ತಿಳಿಸಿದಳು. ದೇವಿಯ ಆದೇಶವನ್ನು ಪಾಲಿಸಿದ ರಾಯರು ದೇವಿಯನ್ನು ಪ್ರತಿಷ್ಠಾಪಿಸಿದರು. ಬನ್ನಿಮರದ ಕೆಳಗೆ ಪ್ರತಿಷ್ಠಾಪನೆಯಾದ್ದರಿಂದ ಭಕ್ತರು ಈ ದೇವಿಯನ್ನು ಬನ್ನಿಮಹಾಕಾಳಿ ಎಂದು ಪೂಜಿಸಲಾರಂಭಿಸಿದ್ದಾರೆ. ಬಂಡಿಯ ಹಿಂದೆ ಬಂದ ಹಿನ್ನೆಲೆಯಲ್ಲಿ ಬಂಡಿ ಮಹಾಂಕಾಳಿ ಅಂತಲೂ ಭಕ್ತರಿಂದ ಪೂಜಸಲ್ಪಿಸುತ್ತಿದ್ದಾಳೆ ಈ ಮಾತೆ. ಅಂದಿನಿಂದ ಇಂದಿನವರೆಗೂ ಅಮ್ಮನವರನ್ನು ವರ್ಷಕ್ಕೊಮ್ಮೆ ಅದ್ದೂರಿಯಾಗಿ ಕರಗದ ಮೂಲಕ ಆರಾಧಿಸಲಾಗುತ್ತದೆ. ಪ್ರಾರಂಭದಲ್ಲಿ ಧರ್ಮಲಿಂಗು ಎನ್ನುವವರು ಬೆಟ್ಟದ ಮಲ್ಲಿಗೆ ಮತ್ತು ಬೇವಿಸೊಪ್ಪಿನ ಕಳಸ ಹೊತ್ತು ಅಗ್ನಿಕೊಂಡ ಕೊಂಡ ಹಾಯುತ್ತಿದ್ದರು. ಈಗ ಆರ್.ಎನ್. ಯೋಗೇಶ್ 24ನೇ ಬಾರಿಗೆ ಕರಗ ಧರಿಸುತ್ತಿದ್ದಾರೆ.

## ಚಾಮುಂಡೇಶ್ವರಿ ಅಮ್ಮನವರ ಕರಗ

ಆಗಸ್ಟ್ 4ರಂದು ನಗರವನ್ನು ಸಲಹುತ್ತಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಸೇರಿದಂತೆ 9 ದೇವಿಯರ ಕರಗ ಮಹೋತ್ಸವ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ. ಇಡೀ ನಗರ ಮಿನಿ ದಸರೆಯಂತೆ ಕಂಗೊಳಿಸಲಿದೆ. ಲಕ್ಷಾಂತರ ಮಂದಿ ಈ ಕರಗ ಮಹೋತ್ಸವ ಕಣ್ತುಂಬಿಕೊಳ್ಳಲು ರಾಜ್ಯದ ವಿವಿಧ ಭಾಗಗಳಿಂದ ಆಗಮಿಸುತ್ತಾರೆ.

ಮೊದಲ ಪುಟದಿಂದ

## ಈ ವಾರ ಸಂಪುಟ ವಿಸ್ತರಣೆ

ನಾವು ಬರ, ನೀರಿನ ಸಮಸ್ಯೆ ಮತ್ತು ಕಾವೇರಿ ಸಮಸ್ಯೆ, ಮಹಾದಾಯಿ, ಮೇಕೆದಾಟು ಮತ್ತು ಕೃಷ್ಣಾ ನದಿ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತೇವೆ. ಇದನ್ನೆಲ್ಲ ನಾವು ತಿಳಿಸಬೇಕಾಗಿದೆ. ಚರ್ಚಿಸಲು ಹಲವು ಯೋಜನೆಗಳಿವೆ ಎಂದು ಶಿವಕುಮಾರ್ ಹೇಳಿದರು. ಇಲ್ಲಿಯೂ ಬಹಳ ಹಿರಿಯ ನಾಯಕರನ್ನು ಭೇಟಿ ಮಾಡಬೇಕಾಗಿದೆ. ನಾನು ಹಿಂತಿರುಗಿದ ತಕ್ಷಣ, ನಾನು ಅವರನ್ನೂ ಭೇಟಿ ಮಾಡುತ್ತೇನೆ. ವಿರೋಧ ಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿ ಸೇರಿದಂತೆ ಎಲ್ಲರನ್ನೂ ಭೇಟಿ ಮಾಡುತ್ತೇನೆ. ಅವರಿಗೆ ತಿಳಿಸಬೇಕಾದ ಕೆಲವು ಪ್ರಮುಖ ವಿಷಯಗಳಿವೆ. ನಾನು ಅದನ್ನು ಮಾಡುತ್ತೇನೆ ಎಂದು ಸಿಎಂ ಹೇಳಿದರು.

### 'ಸುಪ್ರೀಂ' ತೀರ್ಪಿನಲ್ಲೂ ತಿಳಿಸಿಲ್ಲ

ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆಯ ಸಮಗ್ರ ಯೋಜನಾ ವರದಿಯನ್ನು ಹಿಂತಿರುಗಿಸಲಾಗಿದೆ. ನ್ಯಾಯಾಧಿಕರಣದ ಆದೇಶ ಹಾಗೂ ಕೇಂದ್ರ ಜಲ ಆಯೋಗದ ಪ್ರಸ್ತುತ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಪರಿಷ್ಕೃತ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಕೇಂದ್ರ ಸಚಿವ ರಾಜ್ ಭೂಷಣ್ ಚೌಧರಿ ಲಿಖಿತ ಉತ್ತರ ನೀಡಿದ್ದಾರೆ.

### ಮೇಕೆದಾಟುಗೆ ಸಮ್ಮತಿ ಬೇಕಿಲ್ಲ

ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ಒಪ್ಪಿಗೆಯನ್ನು ಪಡೆಯ ಬೇಕು ಎಂಬ ಕಾವೇರಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ಫೆಬ್ರವರಿ 2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿದಿದೆಯೇ? ಪ್ರಸ್ತಾವಿತ ಮೇಕೆದಾಟು ಯೋಜನೆಗೆ ಕರ್ನಾಟಕ ಕೆಳಗಿನ ನದಿ ತೀರ್ಪಿನ ರಾಜ್ಯಗಳ ಒಪ್ಪಿಗೆಯನ್ನು ಪಡೆದಿದೆಯೇ? ಒಪ್ಪಿಗೆ ಪಡೆದಿದ್ದಲ್ಲಿ ಅದರ ವಿವರಗಳು ಮತ್ತು ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆಯ ಪ್ರಸ್ತುತ ಸ್ಥಿತಿ ಏನು ಎಂದು ರಾಮದಾಸ್ ಪ್ರಶ್ನಿಸಿದ್ದರು.

### ಅಧಿಕಾರಿಗಳೊಂದಿಗೆ ಸಿಎಂ ಸಭೆ

ಕರ್ನಾಟಕ ಭವನದಲ್ಲಿ ಸೋಮವಾರ ಸಮಾಲೋಚನೆ ನಡೆಸಿದರು. ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ, ದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ ಜಯಚಂದ್ರ, ಕರ್ನಾಟಕ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಸಿಎಂ ಕಾರ್ಯದರ್ಶಿ ನಕುಲ್, ತಾಂತ್ರಿಕ ಸಲಹೆಗಾರ ಜೈಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

### ಕಾಂಗ್ರೆಸ್ ನಾಯಕರ ಪ್ರತಿಭಟನೆ

ಆವರಣಕ್ಕೆ ಬರುತ್ತಿದ್ದಂತೆ ವಿರೋಧ ಪಕ್ಷಗಳ ನಾಯಕರು, ಲಾಠಿ ಏಟಿಗೆ ಲೆಕ್ಕ ಕೊಡಿ ಎಂದು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ನೀಟ್ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಪ್ರಧಾನ್ ಅವರು, ಕೇಂದ್ರ ಶಿಕ್ಷಣ ಸಚಿವ ಸ್ಥಾನಕ್ಕೆ ಜುಲೈ 25ರಂದು ರಾಜೀನಾಮೆ ನೀಡಿದ್ದರು. ಆ ಖಾತೆಯ ಹೊಣೆಯನ್ನು ಕರ್ನಾಟಕದ ಧಾರವಾಡ ಸಂಸದ ಪ್ರಲ್ಹಾದ ಜೋಶಿ ಅವರಿಗೆ ವಹಿಸಲಾಗಿದೆ. ಪ್ರಧಾನ್ ಅವರು ಸಂಸತ್ತಿನ ಆವರಣಕ್ಕೆ ಬರುತ್ತಿದ್ದಂತೆ ವಿರೋಧ ಪಕ್ಷಗಳ ನಾಯಕರು ಪ್ರಿಯಾಂಕಾ ಗಾಂಧಿ ವಾದ್ರಾ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಅವರು, ಲಾಠಿ ಏಟಿಗೆ ಲೆಕ್ಕ ಕೊಡಿ, ಅಮಿತ್ ಶಾ ಉತ್ತರ ನೀಡಿ ಎಂದು ಆಗ್ರಹಿಸಿದರು.

## ಆ.1ಕ್ಕೆ ನಾನಾ ಸ್ಪರ್ಧೆಗಳು

ಮೈಸೂರು: ಕುವೆಂಪುನಗರದ ಕುವೆಂಪು ವಿಶ್ವ ಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಮಾಜಿ ಶಾಸಕ ಕೆಂಪೀರೇಗೌಡರ ಸ್ಮರಣಾರ್ಥ ಆ. 1 ರಂದು ರಂಗೋಲಿ ಸ್ಪರ್ಧೆ, 2 ರಂದು ವಿವಿಧ ವಯೋಮಾನದವರಿಗೆ ಕ್ರೀಡೆಗಳನ್ನು ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಎಚ್.ಕೆ.ರಾಮು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆ. 1 ರಂದು ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ಬಡಾವಣೆಯ ಸೌಗಂಧಿಕಾ ಉದ್ಯಾನದಲ್ಲಿ ರಂಗೋಲಿ ಸ್ಪರ್ಧೆ, 2 ರಂದು ಬಡಾವಣೆಯ ವಿವೇಕಾನಂದ ಕ್ರೀಡಾಂಗಣದಲ್ಲಿ ಕ್ರೀಡೆಗಳು ನಡೆಯಲಿವೆ. ಅಲ್ಲದೆ, ಆ. 15 ರಂದು ಸಂಜೆ 4ಕ್ಕೆ ಸೌಗಂಧಿಕಾ ಉದ್ಯಾನದಲ್ಲಿ ಸಂಘದ ವಾರ್ಷಿಕೋತ್ಸವ ನಡೆಯಲಿದ್ದು, ಈ ವೇಳೆ ವಿಜೇತರಿಗೆ ಬಹುಮಾನ ವಿತರಿಸಲಾಗುವುದೆಂದರು. ಕೆ.ಟಿ. ವೀರಪ್ಪ, ಪ್ರೊ.ಸಿ.ನಾಗಣ್ಣ, ಕೆ.ಉಮಾಶಂಕರ್, ಕೆ.ಬಿ. ಲಿಂಗರಾಜು, ಮೋದಾ ಮಣಿ, ಸುಶೀಲಾ ನಂಜಪ್ಪ, ಲಕ್ಷ್ಮಿಕಾಂತ್, ರಘುರಾಂ ಗೌಡ ಹಾಜರಿದ್ದರು.



# ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಯುವಪೀಳಿಗೆಯ ಸಹಕಾರ ಅಗತ್ಯ

### ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ । ಡ್ರಗ್ಸ್ ವ್ಯಸನಮುಕ್ತ ಜಾಗೃತಿ

ಮೈಸೂರು: ಮಾದಕ ವಸ್ತುಗಳ ನಿರ್ಮೂಲನೆಗೆ ಕೇವಲ ಸರ್ಕಾರ ಮತ್ತು ಪೊಲೀಸ್ ಇಲಾಖೆ ಮಾತ್ರ ಹೋರಾಟ ನಡೆಸಿದರೆ ಸಾಲದು; ಇದರ ಸಂಪೂರ್ಣ ಯಶಸ್ಸಿಗೆ ಯುವಪೀಳಿಗೆಯ ಸಕ್ರಿಯ ಸಹಕಾರ ಅತ್ಯಗತ್ಯ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಮೈಸೂರಿನ ನಗರ ಪೊಲೀಸ್ ಹಾಗೂ ಟೆರಿಷಿಯನ್ ಕಾಲೇಜಿನ ಎನ್.ಎಸ್.ಎಸ್ (ಓಖಖ) ಘಟಕದ ಜಂಟಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಡ್ರಗ್ಸ್ ವ್ಯಸನಮುಕ್ತ ಜಾಗೃತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಮಾದಕ ಮುಕ್ತ ಕರ್ನಾಟಕ ಸರ್ಕಾರದ ಗುರಿ**

ಸಮಾಜದ ನಿಜವಾದ ಭವಿಷ್ಯ ಯುವಜನತೆಯ ಕೈಯಲ್ಲಿದೆ. ಯುವಕರು ಮಾನಸಿಕವಾಗಿ ಮತ್ತು ದೈಹಿಕವಾಗಿ ದೃಢವಾಗಿದ್ದಾಗ ಮಾತ್ರ ನಮ್ಮ ದೇಶವು ಯಶಸ್ಸು ಹಾಗೂ ಪ್ರಗತಿ ಕಾಣಲು ಸಾಧ್ಯ. ಪ್ರಸ್ತುತ ದಿನಗಳಲ್ಲಿ ಕೇವಲ ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಗ್ರಾಮೀಣ ಭಾಗಗಳಲ್ಲೂ ಜನರು ಮಾದಕ ದ್ರವ್ಯಗಳಿಗೆ ದಾಸರಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಈ ವ್ಯಸನದಿಂದ ಜನರನ್ನು ಮುಕ್ತಗೊಳಿಸಲು ಸರ್ಕಾರ ಹಾಗೂ ಪೊಲೀಸ್ ಇಲಾಖೆ ಹಲವು ಯೋಜನೆಗಳನ್ನು ರೂಪಿಸಿದ್ದು, ಕಠಿಣ ಕ್ರಮಗಳನ್ನು ಕೈಗೊಂಡಿವೆ. ಇಡೀ ರಾಜ್ಯವನ್ನು ಮಾದಕ ವ್ಯಸನಮುಕ್ತ ರಾಜ್ಯವನ್ನಾಗಿ ಮಾಡುವುದೇ ನಮ್ಮ ಪ್ರಮುಖ ಗುರಿಯಾಗಿದೆ ಎಂದು ವಿವರಿಸಿದರು.

ಈ ಜಾಗೃತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತೆ ಡಾ. ಹರ್ಷ ಪ್ರಿಯಂವದಾ, ಅಪರಾಧ ಹಾಗೂ ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತ ಕೆ.ಎಸ್. ಸುಂದರ್ ರಾಜ್, ಟೆರಿಷಿಯನ್ ಕಾಲೇಜಿನ ನಿರ್ದೇಶಕರಾದ ರೆವೆರೆಂಡ್ ಡಾ. ಸಿಸ್ಟರ್ ಪ್ರಫುಲ್ಲಾ ಹಾಗೂ ಟೆರಿಷಿಯನ್ ವಿದ್ಯಾ ಸಂಸ್ಥೆಗಳ ವ್ಯವಸ್ಥಾಪಕರಾದ ರೆವೆರೆಂಡ್ ಸಿಸ್ಟರ್ ಅಂಜಲಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.




### 'ರೈಸ್' ಹಾಗೂ 'ಬೇಡ ಬ್ರೋ' ಜಾಗೃತಿ ಅಭಿಯಾನ

ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ ಮಾದಕ ದ್ರವ್ಯಗಳ ವಿರುದ್ಧ ಜಾಗೃತಿ ಮೂಡಿಸಲು 'ರೈಸ್' ಹಾಗೂ 'ಬೇಡ ಬ್ರೋ' ಎಂಬ ಅಭಿಯಾನಗಳನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ಸರ್ಕಾರ ಹಾಗೂ ಪೊಲೀಸ್ ಇಲಾಖೆಯು 2028ರ ವೇಳೆಗೆ 'ಮಾದಕ ವಸ್ತು ಮುಕ್ತ ಕರ್ನಾಟಕ' ನಿರ್ಮಿಸುವ ಮಹತ್ವಾಕಾಂಕ್ಷೆಯ ಗುರಿ ಹೊಂದಿದ್ದು, ಆ ಹಾದಿಯಲ್ಲಿ ಕಳೆದ ಒಂದು ವರ್ಷದಿಂದ ಮೈಸೂರು ಜಿಲ್ಲೆಯನ್ನು ಮಾದಕ ವಸ್ತು ಮುಕ್ತವಾಗಿಸಲು ನಿರಂತರವಾಗಿ ಶ್ರಮಿಸಲಾಗುತ್ತಿದೆ ಎಂದರು.

### ಕ್ಷಣಿಕ ಸುಖಕ್ಕಾಗಿ ಜೀವನ ಹಾಳುಮಾಡಿಕೊಳ್ಳದಿರಿ

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಶಾಸಕ ತನ್ವೀರ್ ಸೇಠ್, ವ್ಯಸನಮುಕ್ತ ಸಮಾಜ ನಿರ್ಮಾಣದ ಕುರಿತು ಪ್ರತಿಯೊಬ್ಬರೂ ಆಲೋಚಿಸಬೇಕಾದ ತುರ್ತು ಸಂದರ್ಭ ಇದಾಗಿದೆ. ಇಂದಿನ ಯುವಜನತೆ ನಮ್ಮ ದೇಶದ ಆಸ್ತಿ. ಆದರೆ, ಅನೇಕ ಯುವಕ-ಯುವತಿಯರು ಕ್ಷಣಮಾತ್ರದ ಸಂತೋಷಕ್ಕಾಗಿ ಮಾದಕ ದ್ರವ್ಯಗಳ ದಾಸರಾಗಿ ತಮ್ಮ ಸುಂದರ ಜೀವನವನ್ನು ಹಾಳುಮಾಡಿಕೊಳ್ಳುತ್ತಿರುವುದು ದುರಂತ ಎಂದು ವಿಷಾದಿಸಿದರು.

ಮೊದಲ ಪುಟದಿಂದ

## ಸಾಹುಕರ್ ಮಗಳಿಗೆ ಹೈಕೋರ್ಟ್ ತರಾಟೆ

ನ್ಯಾಯಮೂರ್ತಿ ನಾಗಪ್ರಸನ್ನ ಅವರ ಪೀಠ, ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡಿದೆ. ವರ್ಷಕ್ಕೆ 30 ಲಕ್ಷ ರೂ. ಆದಾಯವಿರುವ ನೀವು 40 ಸಾವಿರ ರೂ. ಆದಾಯವೆಂದು ಅರ್ಜಿ ಸಲ್ಲಿಸಿದ್ದೀರಿ. ಇದು ಮೇಲ್ನೋಟಕ್ಕೇ ವಂಚನೆ ಎಂಬುದು ತಿಳಿಯುತ್ತದೆ. ಕೆಪಿಎಸ್‌ಸಿ ಪ್ರತಿ ನೇಮಕವೂ ವಿವಾದಗಳಿಂದ ಕೂಡಿದೆ. ಬಡವನಿಗೆ ಸಿಗಬೇಕಾದ ಆಯ್ಕೆಯನ್ನು ನೀವು ಕಿತ್ತುಕೊಂಡಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡಿತು.

### 'ಸುಪ್ರೀಂ ಅಂಗಳಕ್ಕೆ' ಆನ್‌ಲೈನ್ ನೀಟ್

ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ ಎಂದು ನ್ಯಾಯಪೀಠ ಹೇಳಿತು. ಮೇ 3ರಂದು ನಡೆದ ನೀಟ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಪಡಿಸಿ ಮರುಪರೀಕ್ಷೆ ನಡೆಸಲು ನಿರ್ಧರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಆರ್‌ಜೆಡಿ ಸಂಸದ ಸುದಾಕರ್ ಸಿಂಗ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು.

ಕೇಂದ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಈ ಪ್ರಕರಣವನ್ನು ಕೇಂದ್ರ ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸಲಾಗಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಪ್ರಧಾನಿ ಸ್ವತಃ ಈ ಸಮಿತಿ ರಚನೆಯನ್ನು ಘೋಷಿಸಿದ್ದಾರೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ತಜ್ಞ ನಂದನ್ ನೀಲೇಕಣಿ ಸಮಿತಿಯ ಅಧ್ಯಕ್ಷರಾಗಿದ್ದಾರೆ ಎಂದು ಮೆಹ್ತಾ ಹೇಳಿದರು. ಅರ್ಜಿಯ ಮುಂದಿನ ವಿಚಾರಣೆಯನ್ನು ಆಗಸ್ಟ್ 3ಕ್ಕೆ ನಿಗದಿಪಡಿಸಿದೆ.

### ಪರೀಕ್ಷೆ ಅಕ್ರಮ ತಡೆ ಮಸೂದೆ

(ಅಕ್ರಮ ತಡೆಗಟ್ಟುವಿಕೆ) ತಿದ್ದುಪಡಿ ಮಸೂದೆ, 2026 ರ ಪ್ರಕಾರ, ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳ ತನಿಖೆಯನ್ನು ಎರಡು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಉಲ್ಲೇಖಿಸಲಾಗಿದೆ.

## ಲಾಬಿ ಮಾಡಲ್ಲ, ಸಚಿವ ಸ್ಥಾನ ಸಿಗುತ್ತೇ: ಶಾಸಕ ತನ್ವೀರ್ ಸೇಠ್

ಮೈಸೂರು: ನಾನು ದೆಹಲಿಗೆ ಹೋಗಿ ಲಾಬಿ ಮಾಡುವ ಅವಶ್ಯಕತೆ ಇಲ್ಲ. ನನಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎಂದು ಶಾಸಕ ತನ್ವೀರ್ ಸೇಠ್ ವಿಶ್ವಾಸ ವ್ಯಕ್ತಪಡಿಸಿದರು.



ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಈ ಬಾರಿ ಸಚಿವ ಸ್ಥಾನದ ಪಟ್ಟಿಯಲ್ಲಿ ನನ್ನ ಹೆಸರು ಇರುತ್ತದೆ. ಇಂದು ವರಿಷ್ಠರ ಭೇಟಿಗೆ ರಾಜ್ಯ ನಾಯಕರು ತೆರಳಿದ್ದಾರೆ. ನಾಳೆ ನಿಶ್ಚಿತವಾಗಿ ಸಭೆ ನಡೆಯುತ್ತದೆ. ಬುಧವಾರ ಅಥವಾ ಗುರುವಾರ ಸಚಿವ ಸಂಪುಟ ವಿಸ್ತರಣೆ ಆಗುತ್ತದೆ. ಪಕ್ಷ ನಿಷ್ಠೆಯೇ ನನ್ನನ್ನು ಕಾಪಾಡುತ್ತದೆ. ಕಳೆದ ಬಾರಿ ಸಿಎಂ ಮೈಸೂರಿನವರೇ ಆಗಿದ್ದರು. ಹೀಗಾಗಿ ನನಗೆ ಅವಕಾಶ ಸಿಕ್ಕಿರಲಿಲ್ಲ. ಈ ಬಾರಿ ಸಿಗುತ್ತದೆ. ನನ್ನ ನಿಷ್ಠೆ ನನ್ನ ಕೆಲಸ ಎಲ್ಲವೂ ಹೈಕಮಾಂಡ್ ಗೊತ್ತಿದೆ. ಹೀಗಾಗಿ ದೆಹಲಿಗೆ ಹೋಗಿ ಲಾಬಿ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳಿದರು.

## ಆರೋಗ್ಯ ಸೇವೆಯ ಸದುಪಯೋಗ ಪಡೆದುಕೊಳ್ಳಿ

ಗುಂಡ್ಲುಪೇಟೆ: ಹೆಲ್ಪ್ ಏಜ್ ಇಂಡಿಯಾ ಸಂಸ್ಥೆಯು ಎಕ್ಸಾನ್ ಮೊಬೈಲ್ ಕಂಪನಿಯ ಸಹಯೋಗದಲ್ಲಿ ಸಂಚಾರಿ ಆರೋಗ್ಯ ಘಟಕವನ್ನು ಆರಂಭಿಸಿದ್ದು, ತಾಲೂಕಿನ ಗೋಪಾಲಪುರ ಗ್ರಾಮದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಘಟಕಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಆರಂಭಿಸಿರುವ ಈ ಸಂಚಾರಿ ಆರೋಗ್ಯ ಘಟಕದ ಸೇವೆಯನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ, ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ಎಕ್ಸಾನ್ ಮೊಬೈಲ್ ಕಂಪನಿಯ ಸಮುದಾಯ ಸಂಪರ್ಕ ಅಧಿಕಾರಿ ಪ್ರಶಾಂತ್ ದೇಶಪಾಂಡೆ ಹಾಗೂ ಅರ್ಥಶಾಸ್ತ್ರಜ್ಞೆ ಸಲೋನಿಕಾ ಮಾತನಾಡಿ, ಕಂಪನಿಯ ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮಗಳಡಿ ಆರೋಗ್ಯ ಕ್ಷೇತ್ರಕ್ಕೆ ನೀಡುತ್ತಿರುವ ಸಹಕಾರದ ಬಗ್ಗೆ ಮಾಹಿತಿ ನೀಡಿದರು. ಆರೋಗ್ಯ ಸೇವೆಗಳನ್ನು ಪ್ರತಿಯೊಬ್ಬರೂ ಸಮರ್ಪಕವಾಗಿ ಬಳಸಿಕೊಂಡು ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ. ಅಲೀಮ್ ಫಾಷ ಮಾತನಾಡಿ, ಆರೋಗ್ಯ ಇಲಾಖೆಯಿಂದ ಅಗತ್ಯ ಸಹಕಾರವನ್ನು ನೀಡಲಾಗುವುದು. ಸಂಚಾರಿ ಆರೋಗ್ಯ ಘಟಕದ ಸೇವೆಗಳು ಇನ್ನಷ್ಟು ಹಿಂದುಳಿದ ಹಾಗೂ ದೂರದ ಗ್ರಾಮಗಳಿಗೂ ವಿಸ್ತರಿಸಬೇಕು ಎಂದರು.

ಹೆಲ್ಪ್ ಏಜ್ ಇಂಡಿಯಾ ಸಂಸ್ಥೆಯ ರಾಜ್ಯ ಮುಖ್ಯಸ್ಥ ಪ್ರಕಾಶ್ ಎನ್.ಎಂ. ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಥೆಯ ಸಾಮಾಜಿಕ ಸೇವಾ ಕಾರ್ಯಚಟುವಟಿಕೆಗಳು ಹಾಗೂ ಎಕ್ಸಾನ್ ಮೊಬೈಲ್ ಕಂಪನಿಯ ಸಹಯೋಗದ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ಕಬ್ಬಿಣ ಕೋಲೇಶ್ವರ ಮಠದ ಗಂಗಾಧರ ಸ್ವಾಮೀಜಿ. ಲೋಕೇಶ್ , ಹಿರಿಯ ಮುಖಂಡರು ಆರೋಗ್ಯ ಇಲಾಖೆಯ ಸಿಬ್ಬಂದಿ, ಹೆಲ್ಪ್ ಏಜ್ ಇಂಡಿಯಾ ಸಂಸ್ಥೆಯ ಜಿಲ್ಲಾ ಹಾಗೂ ತಾಲೂಕು ಸಂಯೋಜಕರು, ಆರೋಗ್ಯ ಕಾರ್ಯಕರ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.




### ಶ್ರೀ ಅನ್ನದಾನೇಶ್ವರ ಸ್ವಾಮೀಜಿ ಹೇಳಿಕೆ । ಪಟೇಲ್ ಆಂಗ್ಲ ಶಾಲೆಯಲ್ಲಿ ಕಾರ್ಗಿಲ್ ವಿಜಯೋತ್ಸವ ಮತ್ತು ಕೆ.ಎಚ್.ರಾಮಯ್ಯ ಸ್ಮರಣೆ

# ದೇಶ ಮೊದಲು, ನಂತರ ಕುಟುಂಬ ಎಂಬುದನ್ನು ಮರೆಯದಿರಿ

ರಾಮನಗರ: ದೇಶ ಮೊದಲು, ನಂತರ ಕುಟುಂಬ ಎಂಬುದನ್ನು ದೇಶವಾಸಿಗಳು ಸದಾ ನೆನಪಿನಲ್ಲಿಡಬೇಕು ಎಂದು ಆದಿ ಚುಂಚನಗಿರಿ ಶಾಖಾ ಮಠದ ಮುಖ್ಯಸ್ಥ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿ ಕರೆ ನೀಡಿದರು.

ನಗರದ ಪಟೇಲ್ ಪಬ್ಲಿಕ್ ಆಂಗ್ಲ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಗಿಲ್ ವಿಜಯೋತ್ಸವ ಆಚರಣೆ ಮತ್ತು ಒಕ್ಕಲಿಗ ಸಂಘದ ಸಂಸ್ಥಾಪಕ ಕೆ.ಎಚ್.ರಾಮಯ್ಯ ಅವರ 147ನೇ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು. ದೇಶದ ಗಡಿ ಕಾಯುತ್ತಿರುವ ಯೋಧರು ನಮ್ಮ ರಕ್ಷಣೆಗಾಗಿ ತಮ್ಮ ಆತ್ಮಾರ್ಪಣೆಗೂ ಸಿದ್ದರಾಗಿದ್ದಾರೆ. ಇನ್ನೊಂದೆಡೆ ದೇಶದೊಳಗೆ ರೈತರು ನಮಗೆಲ್ಲ ಆಹಾರ ನೀಡಲು ಬೆವರು ಸುರಿಸುತ್ತಿದ್ದಾರೆ. ಹೀಗಾಗಿ ಪ್ರತಿಯೊಬ್ಬ ಭಾರತೀಯನು ಜೈ ಜವಾನ್, ಜೈ ಕಿಸಾನ್ ಎಂಬ ಘೋಷಣೆಯನ್ನು ಮರೆಯಬಾರದು ಎಂದರು.

ಕೆ.ಎಚ್.ರಾಮಯ್ಯ ಅವರು ಸ್ವಾಮಿ ವಿವೇಕಾನಂದರಿಂದ ಪ್ರೇರಿತರಾಗಿ ಅವರ ಅನುಯಾಯಿಯಾಗಲು



ಮದ್ರಾಸ್ (ಇಂದಿನ ಚೆನ್ನೈ) ನಗರಕ್ಕೆ ಹೋಗಿದ್ದರು. ಇವರ ಸೇವೆಯನ್ನು ಗಮನಿಸಿದ ವಿವೇಕಾನಂದರು, ಕೆ.ಎಚ್,.ರಾಮಯ್ಯ ಅವರನ್ನು ಮಾತನಾಡಿಸಿ, ಮೊದಲು ನಿನ್ನ ಸಮುದಾಯವನ್ನು ಸಂಘಟಿಸು, ಶ್ರೀ ಮಠವನ್ನು ಸಲಹು ಎಂದು ಸಲಹೆ ನೀಡಿದರು. ಸ್ವಾಮಿ ವಿವೇಕಾನಂದರ ಸಲಹೆಯನ್ನು ಸ್ವೀಕರಿಸಿದ ಅವರು, ಒಕ್ಕಲಿಗರ ಸಂಘವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಜೊತೆಗೆ ಶ್ರೀ ಆದಿಚುಂಚನಗಿರಿ ಮಠಕ್ಕೆ ಶಕ್ತಿ ತುಂಬಿದರು. ಮೈಸೂರು ಅರಸರ ಕಾಲದಲ್ಲಿ ಕೆ.ಎಚ್.ರಾಮಯ್ಯ ಉತ್ತಮ ಸ್ಥಾನವನ್ನು ಹೊಂದಿದ್ದರು. ಕೆ.ಎಚ್.ರಾಮಯ್ಯ ಅವರು ಮಹಾನ್ ಚೇತನ ಎಂದರು.

ಜಿಲ್ಲಾ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷರು ಹಾಗೂ ಪಟೇಲ್ ಆಂಗ್ಲ ಶಾಲೆಯ ಸಂಸ್ಥಾಪಕರು ಆದ ಪಟೇಲ್ ಸಿ ರಾಜು ಮಾತನಾಡಿ, ಜಿಲ್ಲಾ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಪ್ರತಿವರ್ಷ ಕೆಎಚ್ ರಾಮಯ್ಯನವರ ಜನ್ಮ ದಿನಾಚರಣೆ ಮತ್ತು ಕಾರ್ಗಿಲ್ ವಿಜಯೋತ್ಸವ ಕಾರ್ಯ ಕ್ರಮವನ್ನು ನಡೆಸಿಕೊಂಡು ಬರುತ್ತಿದ್ದು ಸಮುದಾಯದ ಯುವ ಸಮುದಾಯದ ಶ್ರೇಯಸ್ಸಿಗಾಗಿ ಸಿಇಟಿ, ನೀಟ್ ಪರೀಕ್ಷೆ ತಯಾರಿಗೆ ತರಬೇತಿ, ವಧು-ವರರ ವೇದಿಕೆ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ ಎಂದು ತಿಳಿಸಿದರು . ವನವಾಸಿ ಕಲ್ಯಾಣ ಸಂಘದ ಕಾರ್ಯದರ್ಶಿ ಸತೀಶ್ ಮಾತನಾಡಿ, ಕಾರ್ಗಿಲ್ ಯುದ್ದ, ವೀರಮರಣವನ್ನು ಅಪ್ಪಿದ ಯೋಧರ ಬಗ್ಗೆ ಮಾತನಾಡಿದರು. ಸನ್ಮಾನವನ್ನು ಸ್ವೀಕರಿಸಿದ ನಿವೃತ್ತ ಯೋಧ ವಿಜಯ್ ಕುಮಾರ್ ಮಾತನಾಡಿ, ತಾವು ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ವೇಳೆಯ ತಮ್ಮ ಅನುಭವಗಳನ್ನು ವಿದ್ಯಾರ್ಥಿಗಳಿಗೆ ತಿಳಸಿಕೊಟ್ಟರು. ರಾಮನಗರ ರೋಟರಿ ಅಧ್ಯಕ್ಷರಾದ ಗಾಯಿತ್ರಿ ದೇವಿ ಮಾತನಾಡಿದರು. ಶಾಲೆಯ ವಿದ್ಯಾರ್ಥಿಗಳು ಕಾರ್ಗಿಲ್ ವಿಜಯೋತ್ಸವದ ಕಿರು ನಾಟಕಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕ ವಿನೋದ್, ನೇಗಿಲ ಯೋಗಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಮ್ಮೇಗೌಡ ಹಾಗೂ ಖಜಾಂಚಿಗಳಾದ ರವಿ ಸಿ ಉಪಾಧ್ಯಕ್ಷ ಶಿವಣ್ಣ ಪದಾಧಿಕಾರಿಗಳಾದ ಮಲ್ಲೇಶ್, ನಂಜಪ್ಪ, ಅರುಣ್ ಕುಮಾರ್, ಬಿ.ಟಿ.ರಾಜೇಂದ್ರ , ಬಿ.ಟಿ.ದಿನೇಶ್, ಎಂ ಡಿ ಶಿವಕುಮಾರ್, ನೇಗಿಲ ಯೋಗಿ ಮಹಿಳಾ ಘಟಕದ ಅಧ್ಯಕ್ಷರಾದ ಮಮತಾ ಹೆಚ್‌ಎಸ್ ಉಪಾಧ್ಯಕ್ಷರಾದ ನಾಗಮಣಿ ಮತ್ತು ಚುಡಾಮಣಿ ಪಟೇಲ್ ಶಾಲೆಯ ಸಹಕಾರದರ್ಶಿಯಾದ ಕಾರ್ತಿಕ್ ಗೌಡ ಸಿ.ಆರ್, ನೇಗಿಲು ಯೋಗಿ ಕನಕಪುರ ವಿಭಾಗದ ಅಧ್ಯಕ್ಷ ಗಬ್ಬಾಡಿ ಕಾಡೇಗೌಡ ಮತ್ತು ರಾಮನಗರ ತಾಲೂಕು ಒಕ್ಕಲಿಗ ಸಂಘದ ನಿರ್ದೇಶಕರಾದ ಶಿವ ಸ್ವಾಮಿ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಶುದ್ಧ ಕುಡಿಯುವ ನೀರು ಘಟಕ ಸರಿಪಡಿಸಿದ ವೈದ್ಯರು

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಕೆಟ್ಟುನಿಂತಿದ್ದ ಶುದ್ಧ ಕುಡಿಯುವ ನೀರಿನ ಘಟಕವನ್ನು, ವರ್ತಮಾನ ದಿನಪತ್ರಿಕೆಯ ತಾಲೂಕು ಆಸ್ಪತ್ರೆಗೆ ಬೇಕು ತುರ್ತು ಚಿಕಿತ್ಸೆ ಎಂಬ ಶೀರ್ಷಿಕೆಯ ವರದಿ ಪರಿಣಾಮ ಸರಿಪಡಿಸಿದ್ದಾರೆ.

ದೂರದ ಊರುಗಳಿಂದ ಬರುವ ರೋಗಿಗಳು ಹಾಗೂ ಸಹಾಯಕರು ದಣಿವಾರಿಸಿಕೊಳ್ಳಲು ನೀರಿಲ್ಲದೆ ಪರಿತಪಿಸುತ್ತಿದ್ದರು. ಮಹಿಳಾ ವಾರ್ಡ್‌ನಲ್ಲಿ ಸ್ನಾನಕ್ಕೆ ಬಕೆಟ್ ಇಲ್ಲ. ನೀರು ಬರುತ್ತಿಲ್ಲ. ಶೌಚಾಲಯದಲ್ಲಿ ಬಾಗಿಲು ಇಲ್ಲ. ಗರ್ಭಿಣಿಯರ ಸ್ಕ್ಯಾನಿಂಗ್ ಮಾಡುತ್ತಿಲ್ಲ. ಖಾಸಗಿ ಮೆಡಿಕಲ್ ಗಳಿಗೆ ಉದ್ದೇಶಪೂರ್ವಕವಾಗಿ ಔಷಧ ಬರೆಯುತ್ತಾರೆ ಎಂಬ ದೂರುಗಳನ್ನು ಆಧರಿಸಿ ಜು.22ರಂದು ಪತ್ರಿಕೆ ವಿಸ್ತೃತ ವರದಿ ಪ್ರಕಟಿಸಿತ್ತು.






**ತಾಲೂಕು ಆಸ್ಪತ್ರೆಗೆ ಜಿಲ್ಲಾ ಆರೋಗ್ಯಾಧಿಕಾರಿ ಭೇಟಿ, ಪತ್ರಿಕೆ ವರದಿ ಪರಿಣಾಮ**

ವರ್ತಮಾನ ವರದಿ ಪರಿಣಾಮ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮೋಹನ್, ತಾಲೂಕು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ವೈದ್ಯಕೀಯ ಸಾಮಾಗ್ರಿಗಳ ಕೊಠಡಿ ಪರಿಶೀಲಿಸಿದ್ದಾರೆ. ಕರ್ತವ್ಯದಲ್ಲಿದ್ದ ವೈದ್ಯರನ್ನು ಪ್ರತ್ಯೇಕವಾಗಿ ಗಮನಿಸಿದ್ದಾರೆ. ಈ ವೇಳೆ ಇಬ್ಬರು ವೈದ್ಯರು ಖಾಸಗಿ ಮೆಡಿಕಲ್ ಗೆ ಔಷಧ ಬರೆದಿರುವುದನ್ನು ನೋಡಿದ ಡಿಎಚ್‌ಒ, ನಮ್ಮಲ್ಲೇ ಅಗತ್ಯವಿರುವ ಔಷಧಗಳನ್ನು ಸರಿದೂಗಿಸಿಕೊಂಡು ರೋಗಿಗಳಿಗೆ ಸೇವೆ ನೀಡಬೇಕು. ಖಾಸಗಿ ಮೆಡಿಕಲ್ ಗಳಿಗೆ ಶಿಫಾರಸ್ಸು ಮಾಡುವಂತಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ. ಮಹಿಳಾ ವಾರ್ಡ್‌ಗಳ ಶೌಚಾಲಯದಲ್ಲಿ ಲಾಕ್ ಇಲ್ಲದಿರುವುದನ್ನು ಗಮನಿಸಿ, ಎಲ್ಲ ವಾರ್ಡ್ ಗಳ ಬಾಗಿಲುಗಳಿಗೆ ಲಾಕ್ ಆಕಿಸುವಂತೆ ಸೂಚಿಸಿದ್ದಾರೆ. ಮಂಗಳವಾರ ಹಾಗೂ ಶುಕ್ರವಾರ ತಾಲೂಕು ಆಸ್ಪತ್ರೆಯಲ್ಲಿ ಗರ್ಭಿಣಿಯರನ್ನು ಮತ್ತು ಸ್ಕ್ಯಾನಿಂಗ್ ಅವಶ್ಯವಿರುವ ಇತರೆ ರೋಗಿಗಳು ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ದಿನ ನಿಗದಿಪಡಿಸಿರುವುದಾಗಿ ಮಾಹಿತಿ ನೀಡಿದ್ದಾರೆ.

### ವೈದ್ಯರಿಬ್ಬರ ಆಂತರಿಕ ಕಚ್ಚಾಟದ ಬಗ್ಗೆ ವಿಚಾರಣೆ

ಕೆಲ ವೈದ್ಯರ ಸ್ವ-ಪ್ರತಿಷ್ಠೆಯಿಂದ ರೋಗಿಗಳನ್ನು ಸರಿಯಾಗಿ ಪರೀಕ್ಷಿಸುತ್ತಿಲ್ಲ ಎಂಬ ಅಂಶವನ್ನೂ ಗಮನಿಸಿರುವ ಡಾ.ಮೋಹನ್, ಈ ಕುರಿತು ವಿಚಾರಣೆಗೆ ಮುಂದಾಗಿದ್ದಾರೆ. ಆದರೆ, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಪೂರ್ಣಿಮಾ, ಪ್ರಸೂತಿ ತಜ್ಞೆ ಡಾ.ರೇಖಾ ಇಬ್ಬರು ರಜೆಯಲ್ಲಿದ್ದ ಕಾರಣ ಮುಂದಿನ ದಿನಗಳಲ್ಲಿ ಇಬ್ಬರನ್ನೂ ಕರೆಸಿ ವಿಚಾರಣೆ ಮಾಡಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ವರ್ತಮಾನ ದಿನಪತ್ರಿಕೆಗೆ ತಿಳಿಸಿದ್ದಾರೆ.


ವರ್ತಮಾನ

ತಾಲೂಕು ಆಸ್ಪತ್ರೆಗೆ ಬೇಕು ತುರ್ತು ಚಿಕಿತ್ಸೆ

ಹೊಲಿಗೆ ಬಿಚ್ಚಿಸಲು ರೋಗಿಗಳೇ ಬ್ಲೇಡ್ ತಂದುಕೊಡಬೇಕಾದ ಪರಿಸ್ಥಿತಿ

ಶಿವಕುಮಾರ ತುಂಬಸೋಗೆ

ಸಾರ್ವಜನಿಕ ಆಸ್ಪತ್ರೆ ಹೆಚ್.ಡಿ. ಕೋಟೆ

ಹೊಲಿಗೆ ಬಿಚ್ಚಲು ರೋಗಿಯೇ ಬ್ಲೇಡ್ ಅನ್ನು ತಂದು ಕೊಡಬೇಕೇ ? ಹಳೆ ಆಸ್ಪತ್ರೆಯ ಮಹಿಳಾ ವಾರ್ಡ್ ಅಲ್ಲಿ ಶೌಚಾಲಯದ ಬಾಗಿಲು ಇಲ್ಲ. ರೋಗಿಗಳ ಸ್ನಾನಕ್ಕೆ ನೀರು ಬರುವುದಿಲ್ಲ, ಸ್ನಾನಕ್ಕೆ ಬಕೆಟ್ ಇಲ್ಲ. ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ನಾಲ್ಕೈದು ತಿಂಗಳು ಕಳೆದಿವೆ. ಇಷ್ಟೆಲ್ಲ ಸಮಸ್ಯೆಗಳು ಆಸ್ಪತ್ರೆ ಆಡಳಿತಾಧಿಕಾರಿ ಡಾ.ಪೂರ್ಣಿಮಾ ಅವರಿಗೆ ತಿಳಿದಿಲ್ಲವೇ ? ಸಮಸ್ಯೆ ಬಗೆಹರಿಸಲು ಮೇಲಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸಬೇಕು. ಈ ಬಗ್ಗೆ ತಾಲೂಕು ಆರೋಗ್ಯಾಧಿಕಾರಿ ರವಿಕುಮಾರ್, ಶಾಸಕ ಅನಿಲ್ ಚಿಕ್ಕಮಾದು ತುರ್ತು ಕ್ರಮವಹಿಸಬೇಕಿದೆ.

–ರಾಮರಾಜು ಬೋರೆದೇವರಮುಂಟಿ ಗ್ರಾಮಸ್ಥ.

ವೈದ್ಯರ ಪ್ರತಿಷ್ಠೆಯಿಂದ ರೋಗಿಗಳಿಗೆ ಸಂಕಷ್ಟ

ಸಮಸ್ಯೆ ಬಗೆಹರಿಸಲು ಇಚ್ಛಾಶಕ್ತಿ ಕೊರತೆ ಕೈ ಚೆಲ್ಲಿ ಕುಳಿತ ಶಾಸಕ

**ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ನಿವೃತ್ತ ಅಧಿಕಾರಿಗಳ ಮೇಲೆ ಕ್ರಮಕ್ಕೆ ಯಡವನಹಳ್ಳಿ ಕೃಷ್ಣಪ್ಪ ಆಗ್ರಹ**

## ಶೀಘ್ರದಲ್ಲೇ ಕ್ರಮಕೈಗೊಳ್ಳದಿದ್ದರೆ ಬೀದಿಗಿಳಿದು ಹೋರಾಟ

**ಪಿವಿಎಸ್‌ಎಸ್ ಎಚ್ಚರಿಕೆ.**



ಚಾಮರಾಜನಗರ, ತನ್ನ ಮೂಲ ಜಾತಿಯನ್ನು ಬದಲಾಯಿಸಿ, ಸರ್ಕಾರಿ ಉದ್ಯೋಗಕ್ಕಾಗಿ ಸುಳ್ಳು ಜಾತಿ ಪ್ರಮಾಣ ಪಡೆದಿರುವ ನಿವೃತ್ತ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಪ್ರಜಾ ವಿಮೋಚನಾ ಸಮಿತಿ–ಸಾಮಾಜಿಕ ನ್ಯಾಯ ವೇದಿಕೆ ರಾಜ್ಯಾಧ್ಯಕ್ಷ ಯಡವನಹಳ್ಳಿ ಕೃಷ್ಣಪ್ಪ ಆಗ್ರಹಿಸಿದರು.

ಹನೂರು ತಾಲೂಕಿನ ಕೌದಳ್ಳಿ ಗ್ರಾಮದ ಬಿಸಲಯ್ಯ ಹಾಗೂ ನಾಗರಾಜು ಎಂಬುವವರು ತಮ್ಮ ಮೂಲ ಜಾತಿಯಾದ ಬೆಸ್ತ ಜಾತಿಯನ್ನು ಮರೆಮಾಚಿ ಪರಿಶಿಷ್ಟ ಪಂಗಡ(ನಾಯಕ) ಎಂದು ತಿದ್ದುಪಡಿ ಮಾಡಿಕೊಂಡು ಸರ್ಕಾರಿ ಉದ್ಯೋಗವನ್ನು ಪಡೆದು ಸರ್ಕಾರಕ್ಕೆ ಹಾಗೂ ನಾಯಕ ಜನಾಂಗಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಇವರ ಶಾಲಾ ದಾಖಲಾತಿಯಲ್ಲಿ ಬೆಸ್ತ ಎಂದು ಇದ್ದ ದಾಖಲಾತಿಯನ್ನು ತಿದ್ದುಪಡಿ ಮಾಡಿ ನಾಯಕ ಎಂದು ಬದಲಾವಣೆ ಮಾಡಿ ಸರ್ಕಾರಿ ಉದ್ಯೋಗವನ್ನು ಅನುಭವಿಸಿ ನಿವೃತ್ತರಾಗಿದ್ದಾರೆ. ಇದರಿಂದ ಮೂಲ ಪರಿಶಿಷ್ಟ ಪಂಗಡ ಜನಾಂಗವರಿಗೆ ಹಾಗೂ ಸರ್ಕಾರಕ್ಕೆ ದ್ರೋಹ ಮಾಡಿದ್ದು, ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಜಾ ವಿಮೋಚನಾ ಸಮಿತಿಯಿಂದ ದೂರು ನೀಡಿದರೂ ಸಹ ಯಾವುದೇ ಕ್ರಮ ಜರುಗಿಸಿಲ್ಲ. ಹಾಗಾಗಿ ಕೂಡಲೇ ಮೇಲಾಧಿಕಾರಿಗಳು ಇದರ ಕ್ರಮ ಕೈಗೊಳ್ಳದಿದ್ದರೆ ಶಿಕ್ಷಣ ಇಲಾಖೆ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುತ್ತದೆ. ಅದಕ್ಕೂ ಸ್ಪಂದನೆ ಸಿಗದಿದ್ದರೆ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಜಾ ವಿಮೋಚನಾ ಸಮಿತಿ–ಸಾಮಾಜಿಕ ನ್ಯಾಯ ಸಮಿತಿ ಉಪಾಧ್ಯಕ್ಷ ಪಿ.ಎಂ.ಮಲ್ಲಿಕಾರ್ಜುನಸ್ವಾಮಿ, ಕಾರ್ಯಾಧ್ಯಕ್ಷ ಅರೆಹಳ್ಳಿ ಅಶ್ವಥ್, ಮೈಸೂರು ವಿಭಾಗೀಯ ಅಧ್ಯಕ್ಷ ಸಿದ್ದರಾಜು ಎಂ. ಕೆಸ್ತೂರು, ಜಿಲ್ಲಾಧ್ಯಕ್ಷ ಮಹೇಶ ಪಿ.ಕುಣಗಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಸಾಕಯ್ಯ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ನಿಂಗರಾಜು, ಕಾರ್ಯಾಧ್ಯಕ್ಷ ಅಂಬಳೆ ಮಹದೇವ್, ಹನೂರು ತಾಲೂಕು ಅಧ್ಯಕ್ಷ ಮಹಾಲಿಂಗಯ್ಯ ಹಾಜರಿದ್ದರು.

**ಎಚ್.ಎಸ್. ನಂಜುಂಡಪ್ರಸಾದ್ ಕರೆ**

# ಸಹಕಾರ ಬ್ಯಾಂಕ್ ಸ್ಥಾಪನೆಗೆ ಸಹಕಾರ ಅಗತ್ಯ

**ಸಹಕಾರ ಸಂಘದ ರಜತ ಮಹೋತ್ಸವ | ಮೂರು ಸಂಘಗಳ ವಾರ್ಷಿಕ ಮಹಾಸಭೆ**

ಚಾಮರಾಜನಗರ: ಜಿಲ್ಲೆಯ ಸಮಗ್ರ ಆರ್ಥಿಕ ಪ್ರಗತಿಗೆ ಪೂರಕವಾಗಿ ಪ್ರತ್ಯೇಕ ಜಿಲ್ಲಾ ಸಹಕಾರ ಬ್ಯಾಂಕ್ ರಚನೆಯಾಗುವುದು ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಹಾಗೂ ಸಹಕಾರಿ ಬಂಧುಗಳು ಒಟ್ಟಾಗಿ ಸಹಕಾರ ನೀಡಬೇಕು ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರೂ ಹಾಗೂ ಚಾಮುಲ್ ನಿರ್ದೇಶಕರೂ ಆದ ಎಚ್.ಎಸ್. ನಂಜುಂಡಪ್ರಸಾದ್ ಮನವಿ ಮಾಡಿದರು.

ನಗರದ ಶ್ರೀ ಬಸವರಾಜಸ್ವಾಮಿಗಳ ಅನುಭವ ಮಂಟಪದಲ್ಲಿ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವ ಉದ್ಘಾಟನೆ ಹಾಗೂ ಮೂರು ಸಂಘಗಳ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಸಲ್ಲದು**

ಜಿಲ್ಲೆಗೆ ಪ್ರತ್ಯೇಕ ಸಹಕಾರ ಬ್ಯಾಂಕ್ ಸ್ಥಾಪನೆಯ ಅವಶ್ಯಕತೆ ಹೆಚ್ಚಿದ್ದು, ಈ ಬಗ್ಗೆ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಹಾಗೂ ಸಹಕಾರಿಗಳು ಸರ್ಕಾರದ ಮೇಲೆ ಒತ್ತಡ ತರಬೇಕಿದೆ. ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಮಾಡದೆ, ಪರಸ್ಪರ ಸಹಕಾರದಿಂದ ಅಭಿವೃದ್ಧಿಯತ್ತ ಹೆಜ್ಜೆ ಹಾಕಬೇಕಿದೆ. ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘವು ಯಶಸ್ವಿಯಾಗಿ 25 ವರ್ಷಗಳನ್ನು ಪೂರೈಸಿ, 20 ಕೋಟಿ ರೂ.ಗೂ ಹೆಚ್ಚು ವಹಿವಾಟು ನಡೆಸಿರುವುದು ಹೆಮ್ಮೆಯ ವಿಚಾರ. ಇಂತಹ ಸಂಘಗಳು ಬಲಿಷ್ಠವಾದರೆ ಸಮಾಜಕ್ಕೂ ಹಾಗೂ ಜಿಲ್ಲೆಯ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ. ಸಂಘದ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ ಉನ್ನತ ಪ್ರಶಸ್ತಿ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ನಂಜುಂಡಪ್ರಸಾದ್ ಭರವಸೆ ನೀಡಿದರು.

**ಸಾನ್ನಿಧ್ಯ ಹಾಗೂ ಸನ್ಮಾನ**

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮರಿಯಾಲ ಮಠದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ನಗರ ಮಠದ ಶ್ರೀ ಚನ್ನಬಸವ ಸ್ವಾಮೀಜಿ ವಹಿಸಿದ್ದರು. ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಬಿ.ಎಲ್. ಮುದ್ದಬಸವಣ್ಣ ಸೇರಿದಂತೆ ವಿವಿಧ ಸಂಘಗಳ ನಿರ್ದೇಶಕರು ಹಾಗೂ ಸದಸ್ಯರು ಭಾಗವಹಿಸಿದ್ದರು. ಇದೇ ವೇಳೆ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ನೆರವೇರಿಸಲಾಯಿತು.




### ದಿ. ಎಚ್.ಎಸ್. ಮಹದೇವಪ್ರಸಾದ್ ಕೊಡುಗೆ ಸ್ಮರಣೆ

ಮೈಸೂರು ಜಿಲ್ಲೆಯಿಂದ ವಿಭಜನೆಯಾಗಿ ಚಾಮರಾಜನಗರ ಪ್ರತ್ಯೇಕ ಜಿಲ್ಲೆಯಾಗಿ 29 ವರ್ಷಗಳು ಕಳೆಯುತ್ತಿವೆ. ವಿಭಜನೆಯಾದ ಬಳಿಕ ದಿ. ಎಚ್.ಎಸ್. ಮಹದೇವಪ್ರಸಾದ್ ಅವರು ಸಹಕಾರ ಸಚಿವರಾಗಿದ್ದಾಗ ಜಿಲ್ಲಾ ಹಾಲು ಒಕ್ಕೂಟವನ್ನು ಪ್ರತ್ಯೇಕಗೊಳಿಸಿದ್ದರು. ಜೊತೆಗೆ ಪ್ರತ್ಯೇಕ ಸಹಕಾರ ಬ್ಯಾಂಕ್ ಸ್ಥಾಪನೆಯ ಪ್ರಕ್ರಿಯೆಗೂ ಚಾಲನೆ ನೀಡಿ, ಗ್ರಾಪಂಗೊಂದರಂತೆ ಸಹಕಾರ ಸಂಘಗಳನ್ನು ಸ್ಥಾಪಿಸಲು ಆದೇಶಿಸಿದ್ದರು. ಜಿಲ್ಲೆಯ ಆರ್ಥಿಕ ವಹಿವಾಟು ಹೆಚ್ಚಿಸಲು ಮಾರ್ಗೋಪಾಯಗಳನ್ನು ರೂಪಿಸಿದ್ದ ಅವರು ಸಚಿವರಾಗಿ ಐದು ವರ್ಷ ಪೂರ್ಣಗೊಳಿಸಿದ್ದರೆ ಪ್ರತ್ಯೇಕ ಸಹಕಾರ ಬ್ಯಾಂಕ್ ಎಂದೋ ಸಾಕಾರಗೊಳ್ಳುತ್ತಿತ್ತು. ಆದರೆ ಅವರ ಅಕಾಲಿಕ ನಿಧನದಿಂದ ಜಿಲ್ಲೆಯ ಅಭಿವೃದ್ಧಿ ಕುಂಠಿತವಾಯಿತು ಎಂದು ಅವರ ಸೇವೆಯನ್ನು ಸ್ಮರಿಸಿಕೊಂಡರು.

### ನಿಸ್ವಾರ್ಥ ಸೇವೆಯಿಂದ ಸಂಸ್ಥೆಯ ಬೆಳವಣಿಗೆ

ಮೂರು ಸಂಘಗಳ ಜಂಟಿ ಕ್ರಿಯಾ ಸಮಿತಿಯ ಅಧ್ಯಕ್ಷ ಬಸಪ್ಪ ಮಾತನಾಡಿ, ಜಿಲ್ಲೆಯಲ್ಲಿರುವ ಸರ್ಕಾರಿ ನೌಕರರನ್ನು ಸಂಘಟಿಸಿ ಅವರ ಆರ್ಥಿಕ ಪ್ರಗತಿಗೆ ಪೂರಕವಾಗಿ ಷೇರು ಸಂಗ್ರಹಿಸಿ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲಾಯಿತು. ಪದಾಧಿಕಾರಿಗಳು ಯಾವುದೇ ಭತ್ಯೆ ಪಡೆಯದೆ ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯೇ ಇಂದು ಸಂಘ ರಜತ ಮಹೋತ್ಸವ ಆಚರಿಸಿಕೊಳ್ಳಲು ಕಾರಣ ಎಂದರು. ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗೌರಿ ಶಂಕರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘವು ನೌಕರರಿಗೆ ರಿಯಾಯತಿ ದರದಲ್ಲಿ ಸಾಲ ಸೌಲಭ್ಯ ನೀಡುತ್ತಾ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿದೆ. 25ನೇ ವರ್ಷದ ಸವಿನೆನಪಿಗಾಗಿ ವರ್ಷವಿಡೀ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು. ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ ಮಾತನಾಡಿ, ಕಳೆದ 25 ವರ್ಷಗಳಿಂದ ಮೂರು ಸಂಘಗಳು ಒಂದೇ ವೇದಿಕೆಯಲ್ಲಿ ವಾರ್ಷಿಕ ಸಭೆ ನಡೆಸಿಕೊಂಡು ಬರುತ್ತಿರುವುದು ವಿಶೇಷ ಹಾಗೂ ಹೆಮ್ಮೆಯ ಸಂಗತಿ ಎಂದರು.

**ಶಾಸಕ ಜಿ.ಟಿ.ದೇವೇಗೌಡ ಅಭಿಮತ**

# ಅಭಿವೃದ್ಧಿಯಲ್ಲಿ ಡಿಎಂಜಿ ಹಳ್ಳಿ ಗ್ರಾಪಂ ಮಾದರಿ

ಮೈಸೂರು: ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಸೇರಿದಂತೆ ಉತ್ತಮವಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ. ಈ ನಿಟ್ಟಿನಲ್ಲಿ ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಕೆಲಸಕ್ಕೆ ಮಾದರಿಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ತಾಲ್ಲೂಕಿನ ದೊಡ್ಡ ಮಾರಗೌಡನಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನಿರ್ಮಿಸಲಾದ ಅಬ್ದುಲ್ ನಜೀರ್ ಸಾಬ್ ಜನಾಧಿಕಾರ ಸಭಾಂಗಣ, ಬಸ್ ನಿಲ್ದಾಣವನ್ನು ಸೋಮವಾರ ಉದ್ಘಾಟಿಸಿ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕು ಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಈ ಗ್ರಾಮ ಪಂಚಾಯಿತಿ ಯಶಸ್ವಿಯಾಗಿ ಜನರಿಗೆ ಸೇವೆ ಒದಗಿಸುವ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಅತ್ಯುತ್ತಮವಾಗಿ ಮಾಡಿದೆ. ಗ್ರಾಮಸ್ಥರು ಕೂಡ ಉತ್ತಮವಾದ ಸಹಕಾರ ನೀಡಿದ್ದಾರೆ. ಇದಕ್ಕೆ ಕಾರಣರಾದ ನಿಕಟಪೂರ್ವ ಪಿಡಿಒ ಕೆ.ರುಕ್ಮಾಂಗದಗೆ ಅಭಿನಂದನೆ ತಿಳಿಸುತ್ತೇನೆ ಎಂದು ಹೇಳಿದರು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಡುವಿನ ಸಮನ್ವಯದಿಂದಾಗಿ ಪಂಚಾಯಿತಿಯು ಎರಡು ಬಾರಿ ರಾಜ್ಯಮಟ್ಟದ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಇಲ್ಲಿನ ಜನರು, ಜನಪ್ರತಿನಿಧಿಗಳು, ಅಧಿಕಾರಿಗಳು ಬಹಳ ಒಗ್ಗಟ್ಟಿನಿಂದ ಇದ್ದಾರೆ. ಇದರಿಂದ ನನ್ನ ಮೇಲೆ ಒತ್ತಡ ಕಡಿಮೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ನಿಕಟಪೂರ್ವ ಪಿಡಿಒ ಕೆ.ರುಕ್ಮಾಂಗದ ಮಾತನಾಡಿ, ಶಾಸಕರ ಸಲಹೆ ಹಾಗೂ ನಿರ್ದೇಶನದಿಂದ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಲಾಗಿದೆ. ಶಾಸಕರ ಕ್ಷೇತ್ರದಲ್ಲಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿದ್ದೇನೆ. ಈ ಅವಧಿಯಲ್ಲಿ ಯಾವುದೇ ಒತ್ತಡ ಹಾಕಿಲ್ಲ. ನಿರ್ಭಯವಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿದ್ದಾರೆ. ನಾನು ವರ್ಗಾವಣೆಯಾಗಿದ್ದರೂ ಉದ್ಘಾಟನೆಗೆ ಆಹ್ವಾನಿಸಿದ್ದು ಸಂತೋಷ ತಂದಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ನಿಕಟಪೂರ್ವ ಅಧ್ಯಕ್ಷೆ ಸುಮಿತ್ರ ಮಾದಪ್ಪ, ಸುಮ ಸೋಮನಾಯಕ, ಲತಾ ಪ್ರಸನ್ನಚಾರಿ, ವನಿತಾ ಮಂಜುನಾಥ, ನಿಕಟಪೂರ್ವ ಉಪಾಧ್ಯಕ್ಷಾದ ನಂದರಾಜ, ಪ್ರಭಾ ಶಿವಕುಮಾರ್, ಮಂಗಳಮ್ಮ ಚಾಮಯ್ಯ, ದಾಸಯ್ಯ, ಮಾಜಿ ಸದಸ್ಯರಾದ ಶಂಕರ್, ಪುಟ್ಟಸ್ವಾಮಿ, ಶಿವಕುಮಾರ್, ಪಚ್ಚೇಗೌಡ, ಟಿ.ಕೃಷ್ಣಪ್ಪ, ಭಗವಂತಸ್ವಾಮಿ, ರಾಜಣ್ಣ, ಪಿಡಿಒ ಪ್ರದೀಪ್ ಕುಮಾರ್, ಗ್ರಾ.ಪಂ. ಸಿಬ್ಬಂದಿ ಗಣೇಶ್, ವಿನಯ ಕುಮಾರ್ ಸೇರಿ ಮುಂತಾದವರು ಉಪಸ್ಥಿತರಿದ್ದರು.

### ಎಚ್‌ಡಿಕೆ ಒಬ್ಬರ ಉದ್ದೇಶಿಸಿ ಹೇಳಿಲ್ಲ: ಜಿಟಿಡಿ

**ಮೈಸೂರು:** ನಾಡಹಬ್ಬ ದಸರೆ ವೇದಿಕೆಯಲ್ಲಿ ಎಚ್.ಡಿ. ಕುಮಾರಸ್ವಾಮಿ ಒಬ್ಬರ ರಾಜೀನಾಮೆ ಕೇಳಲಿಲ್ಲ. ಪ್ರಕರಣ ದಾಖಲಾದ ಮಾತ್ರಕ್ಕೆ ರಾಜೀನಾಮೆ ನೀಡುವುದಾದರೆ ಎಲ್ಲರೂ ರಾಜೀನಾಮೆ ಕೊಡಬೇಕು ಎಂದು ಹೇಳಿದ್ದೇನೆಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಮುಡಾ ಹಗರಣದ ವಿಚಾರದಲ್ಲಿ ಸಿದ್ದರಾಮಯ್ಯರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ, ಜೆಡಿಎಸ್ ಬೆಂಗಳೂರಿನಿಂದ ಮೈಸೂರಿನವರೆಗೆ ಹೋರಾಟ ನಡೆಸಿದರು. ಸಿಎಂ ಅವರಿಂದ ಸಚಿವ ಸ್ಥಾನ ಪಡೆದುಕೊಂಡ ಯಾವೊಬ್ಬ ಕಾಂಗ್ರೆಸ್ ಶಾಸಕರು ಈ ಬಗ್ಗೆ ಮಾತನಾಡಿರಲಿಲ್ಲ. ಆದರೆ, ನಾನು ವೇದಿಕೆಯಲ್ಲಿ ಸಿದ್ದರಾಮಯ್ಯ ಏಕೆ ರಾಜೀನಾಮೆ ಕೊಡಬೇಕು. ಹೀಗೆ ದೂರು ದಾಖಲಾದ ಮಾತ್ರಕ್ಕೆ ರಾಜೀನಾಮೆ ಕೊಡುವುದಾದರೆ ಕುಮಾರಸ್ವಾಮಿ, ಬಿಜೆಪಿಯ ಎಲ್ಲಾ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕಾಗುತ್ತದೆ ಎಂದು ಹೇಳಿದರು. ಅದಾದ ಬಳಿಕ ಇಡೀ ರಾಜ್ಯದಲ್ಲಿ ಅವರ ರಾಜೀನಾಮೆ ಚರ್ಚೆ ಅಂತ್ಯವಾಯಿತು. ನಾನು ಸಿದ್ದರಾಮಯ್ಯ ಬೇರೆ ಬೇರೆ ಪಕ್ಷದಲ್ಲಿರಬಹುದು. ಆದರೆ, ನನ್ನ ಅವರ ಸ್ನೇಹ ಎಲ್ಲವನ್ನೂ ಮೀರಿದ್ದಾಗಿದೆ. ಅಂದಿನಿಂದ ಜೆಡಿಎಸ್ ನಲ್ಲಿ ನನ್ನ ಚಿತ್ರ ಹಾಕುವುದನ್ನೇ ಬಿಟ್ಟರು. ಆದರೆ, ನಾನು ಕುಮಾರಸ್ವಾಮಿ ಒಬ್ಬರಿಗೆ ಹೇಳಲಿಲ್ಲ ಎಂದರು.

## ಅಕ್ರಮ ಅಕ್ಕಿ ಸಾಗಣೆ: ಆರೋಪಿ ಬಂಧನ



ಗುಂಡ್ಲುಪೇಟೆ: ಅಕ್ರಮವಾಗಿ ಪಡಿತರ ಅಕ್ಕಿ ಸಾಗಣೆ ಮಾಡುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿ 10 ಕ್ವಿಂಟಾಲ್ 90 ಕೆಜಿ ಅಕ್ಕಿ ವಶಕ್ಕೆ ಪಡೆದ ಘಟನೆ ತಾಲೂಕಿನ ಬೆಟ್ಟದಮಾದಳ್ಳಿ–ತಗ್ಗಲೂರು ಗ್ರಾಮದ ಬಳಿ ನಡೆದಿದೆ.

ಟಿ.ನರಸೀಪುರ ತಾಲೂಕಿನ ಹಳೇ ನರೀಪುರ ಗ್ರಾಮದ ಸದ್ದಾಂ ಹುಸೇನ್ ಬಂಧಿತ ಆರೋಪಿ. ಈತ ಟಾಟಾ ಏಸ್ ಕೆಎ52, 9508 ಗೂಡ್ಸ್ ವಾಹನದಲ್ಲಿ ಪಡಿತರ ಅಕ್ಕಿಯನ್ನು ಸಾಗಣೆ ಮಾಡುತ್ತಿರುವ ಕುರಿತು ಗುಂಡ್ಲುಪೇಟೆ ಆಹಾರ ನಿರೀಕ್ಷಕ ಎಂ.ಪಿ.ಅರವಿಂದ ಅವರು ನೀಡಿದ ಖಚಿತ ಮಾಹಿತಿ ಮೇರೆಗೆ ಬೇಗೂರು ಪೊಲೀಸ್ ಠಾಣಾ ಉಪ ನಿರೀಕ್ಷಕ ನವೀನ್ ಹೆಚ್.ಕೆ ಅವರ ನೇತೃತ್ವದಲ್ಲಿ ಬೆಟ್ಟದಮಾದಳ್ಳಿ–ತಗ್ಗಲೂರು ಗ್ರಾಮದ ಬಳಿ ಪೊಲೀಸ್ ಸಿಬ್ಬಂದಿಗಳು ದಾಳಿ ನಡೆಸಿ ವಾಹನವನ್ನು ತಡೆದು ಪರಿಶೀಲಿಸಿದಾಗ ಸುಮಾರು 16,320 ರೂ. ಮೌಲ್ಯದ 10 ಕ್ವಿಂಟಾಲ್ 90 ಕೆಜಿ ಪಡಿತರ ಅಕ್ಕಿ ಇರುವುದು ಕಂಡು ಬಂದಿದೆ. ಕೂಡಲೇ ವಾಹನ ಸಮೇತ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆ.8, 9ರಂದು ಶ್ರೀದುರ್ಗಾ ಸಪ್ತಶತಿ ಸಹಸ್ರ ಯಜ್ಞ



ಮೈಸೂರು: ಶಾರದಾಮೃತಂ ಧ್ಯಾನ ಸೇವಾ ಚಾರಿಟಬಲ್ ಟ್ರಸ್ಟ್ ವತಿಯಿಂದ ನಗರದಲ್ಲಿ ಆ. 8 ಮತ್ತು 9 ರಂದು ಚಾಮುಂಡಿಬೆಟ್ಟದ ತಪ್ಪಲಿನ ಬೆಟ್ಟದ ಪಾದದ ಬಳಿಯ ನಂಜುಂಡಪ್ಪನವರ ಆಶ್ರಮದಲ್ಲಿ ಶ್ರೀದುರ್ಗಾ ಸಪ್ತಶತಿ ಸಹಸ್ರ ಕಂಠ ಸಂಕಲ್ಪಪೂರ್ಣ ಪಾರಾಯಣ ಯಜ್ಞ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಮಧು ಕವಿತಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 8 ರಂದು ಸಂಜೆ 5ಕ್ಕೆ ನಾಗದೋಷ ಪರಿಹಾರಾರ್ಥ ಧಾರ್ಮಿಕ ಕಾರ್ಯಕ್ರಮ, 9 ರಂದು ಬೆಳಗ್ಗೆ 8ಕ್ಕೆ ಪಾರಾಯಣ ನಡೆಯಲಿದೆ. ಯಾರು ಬೇಕಾದರೂ ಪಾಲ್ಗೊಳ್ಳಬಹುದಾಗಿದೆ. ಆದರೆ 9 ರ ಕಾರ್ಯಕ್ರಮಕ್ಕೆ ಮಹಿಳೆಯರು ನೀಲಿ ಸೀರೆ, ಪುರುಷರು, ಮಕ್ಕಳು ಸಾಂಪ್ರದಾಯಿಕ ಉಡುಗೆ ಧರಿಸಿ ಬರಬೇಕು. ಇವೆರಡಕ್ಕೂ 306 ರೂ. ಶುಲ್ಕವಿದೆ. ಎಲ್ಲ ಪೂಜಾ ಸಾಮಗ್ರಿ ಉಚಿತವಾಗಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 97383 22428 ನ್ನು ಸಂಪರ್ಕಿಸಬಹುದೆಂದರು. ಕನಕಲಕ್ಷ್ಮಿ, ರೋಹಿಣಿ, ಮಧು, ಪಾರ್ವತಿ, ನರೇಂದ್ರಕುಮಾರ್ ಹಾಜರಿದ್ದರು.

## ದಿನವಿಡೀ ಕಾದರೂ ಸಿಗದ ಪ್ರಮಾಣಪತ್ರ

ಗುಂಡ್ಲುಪೇಟೆ: ತಾಲೂಕು ಕಚೇರಿಯಲ್ಲಿ ಜಾತಿ ಹಾಗೂ ಆದಾಯ ಪ್ರಮಾಣಪತ್ರ ಪಡೆಯಲು ಸಾರ್ವಜನಿಕರು ದಿನವಿಡೀ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಈ ಸಮಸ್ಯೆಯನ್ನು ಕೂಡಲೇ ಪರಿಹರಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯಿಸಿದೆ.

ಈ ಕುರಿತು ರೈತ ಮುಖಂಡ ಭೀಮನಬೀಡು ರಾಜು ಮಾತನಾಡಿ, ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ಬಡ ಕುಟುಂಬಗಳು ಜಾತಿ ಮತ್ತು ಆದಾಯ ಪ್ರಮಾಣಪತ್ರಕ್ಕಾಗಿ ಪದೇಪದೆ ತಾಲೂಕು ಕಚೇರಿಗೆ ಅಲೆದಾಡುವಂತಾಗಿದ್ದು, ಸರ್ವರ್ ಸಮಸ್ಯೆ ಹಾಗೂ ಸಿಬ್ಬಂದಿ ಕೊರತೆಯಿಂದ ಅರ್ಜಿಗಳ ವಿಲೇವಾರಿ ವಿಳಂಬವಾಗುತ್ತಿದೆ ಎಂದು ಆರೋಪಿಸಿದರು.

ತಾಲೂಕು ಕಚೇರಿಯಲ್ಲಿ ಹೆಚ್ಚಿನ ಕೌಂಟರ್‌ಗಳನ್ನು ಆರಂಭಿಸಿ, ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಿದರೆ ಅರ್ಜಿಗಳನ್ನು ಸಕಾಲದಲ್ಲಿ ಪರಿಶೀಲಿಸಿ ಪ್ರಮಾಣಪತ್ರಗಳನ್ನು ವಿತರಿಸಲು ಸಾಧ್ಯವಾಗುತ್ತದೆ. ಸಾರ್ವಜನಿಕರು ಮೂಲಭೂತ ದಾಖಲೆಗಳಿಗಾಗಿ ದಿನಗಟ್ಟಲೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ಆಡಳಿತದ ವೈಫಲ್ಯವನ್ನು ತೋರಿಸುತ್ತದೆ ಎಂದು ಟೀಕಿಸಿದರು.

ತಹಶೀಲ್ದಾರ್ ಅವರು ತಕ್ಷಣವೇ ಅಗತ್ಯ ಕ್ರಮ ಕೈಗೊಂಡು, ಹೆಚ್ಚುವರಿ ಕೌಂಟರ್‌ಗಳನ್ನು ತೆರೆಯುವುದರೊಂದಿಗೆ ಸಿಬ್ಬಂದಿಯನ್ನು ನೇಮಿಸಿ, ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುವಂತೆ ಆಗ್ರಹಿಸಿದರು. ಸರ್ಕಾರಿ ಸೇವೆಗಳು ಜನಸ್ನೇಹಿಯಾಗಿರಬೇಕಿದ್ದು, ತಾಲೂಕು ಕಚೇರಿಗಳಲ್ಲಿ ಪಾರದರ್ಶಕ, ತ್ವರಿತ ಹಾಗೂ ಪರಿಣಾಮಕಾರಿ ಸೇವೆ ಒದಗಿಸಬೇಕು ಎಂದರು.



ಸಮಸ್ಯೆಯನ್ನು ಶೀಘ್ರದಲ್ಲಿ ಬಗೆಹರಿಸದಿದ್ದರೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಾಲೂಕು ಕಚೇರಿ ಎದುರು ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು

ಈ ಸಂದರ್ಭದಲ್ಲಿ ದೇವರಹಳ್ಳಿ ಸಿದ್ದಪ್ಪ, ಕಾಂತ, ಬೇರಂಬಾಡಿ ಶಶಿ, ಷಣ್ಮುಖಸ್ವಾಮಿ ಸೇರಿದಂತೆ ಸಂಘದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

# 27ನೇ ಕಾರ್ಗಿಲ್ ವಿಜಯೋತ್ಸವ ಆಚರಣೆ



ಮೈಸೂರು: ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ ಹೋರಾಟಗಾರರ ಉದ್ಯಾನವನ ಸುಬ್ಬರಾಯ ನಕೆರೆಯಲ್ಲಿ ಸತ್ಯ ಮೇವ ಜಯತೇ ತಂಡದಿಂದ ವೀರಯೋಧ ಕ್ಯಾಪ್ಟನ್ ವಿಕ್ರಂ ಭತ್ರ, ಕ್ಯಾಪ್ಟನ್ ಸೌರಭ ಕಾಲಿಯ, ಲೆಫ್ಟಿನೆಂಟ್ ಮನೋಜ್ ಕುಮಾರ್ ಪಾಂಡೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಭಾರತ್ ಮಾತಾ ಕೀ ಜೈ, ಅಮರ ವೀರ ಯೋಧರುಗಳಿಗೆ ಜೈ ಎಂಬ ಜೈಕಾರಗಳನ್ನು ಕೂಗಿ ಬಳಿಕ ಮಾತನಾಡಿದ ಮಾಜಿ ಸೈನಿಕ ವಿ.ಮಹೇಶ್ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದವರು ಅಮರರಾಗಿದ್ದಾರೆ. ಸರ್ಕಾರ ಮುಂದಿನ ದಿನಗಳಲ್ಲಿ ಆದ್ರೂ ಕಾರ್ಗಿಲ್ ಯುದ್ಧದ ಬಗ್ಗೆ ಪಠ್ಯಪುಸ್ತಕಗಳಲ್ಲಿ ಪ್ರಕಟಿಸಬೇಕು ಆಗ ಮಾತ್ರ ನಮ್ಮ ಮುಂದಿನ ಪೀಳಿಗೆಗೆ ಗೊತ್ತಾಗುತೆಂದು ಹೇಳಿದರು.

ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ ಮಾತನಾಡಿ, ಕಾರ್ಗಿಲ್ ವಿಜಯ ದಿನವನ್ನು ನಾವುಗಳು ಮುಂದಿನ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಇಡೀ ಮೈಸೂರಿನಲ್ಲೇ ಮಾದರಿಯಾಗುವಂತೆ ಮಾಡುತ್ತೇವೆಂದರು.

ನಗರ ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಈ ವರ್ಷ ಸತ್ಯಮೇವ ಜಯತೆ ಟೀಮ್ ನ ಮಾಜಿ ಸೈನಿಕರುಗಳು ಕಾರ್ಗಿಲ್ ವಿಜಯ ದಿನವನ್ನು ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ, ದೇಶಕ್ಕಾಗಿ ಮಡಿದ ಅಮರ ಯೋಧರುಗಳನ್ನು ನಾವುಗಳು ಯಾವಾಗಲೂ ಮರೆಯಬಾರದು ಮತ್ತು ಅವರ ಕುಟುಂಬದವರು ಎಷ್ಟೊಂದು ದುಃಖ ಅನುಭವಿಸುತ್ತಿರುತ್ತಾರೆ. ಇಂತಹ ಕಾರ್ಯಕ್ರಮಗಳನ್ನು ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರಬೇಕೆಂದು ತಿಳಿಸಿದರು.

ಯುವ ಮುಖಂಡರಾದ ಜಿ.ರಾಘವೇಂದ್ರ, ಸತ್ಯ ಮೇವ ಜಯತೇ ಟೀಮ್ ನ ಸದಸ್ಯರಾದ ಮಹೇಶ್, ಶ್ರೀನಿವಾಸ್, ಪುರುಷೋತ್ತಮ, ಅನಂತ್ ಕುಮಾರ್, ಮಹದೇವ್, ಪ್ರಸನ್ನ, ಮಂದಣ್ಣ, ನಾಗೇಶ್, ರಾಮಣ್ಣ, ನಿತಿನ್, ಬಾಲಕೃಷ್ಣ,ಅನಿಲ್, ಎ.ಜಿ.ಅನಿಲ್, ಎಚ್.ಎಲ್. ಮಹೇಶ್, ಕಾರಿಯಪ್ಪ, ಜಯಕುಮಾರ್, ಪದ್ಮನಾಭ, ಹಾಲಿ ಸೈನಿಕರಾದ ಹರೀಶ್ ಮತ್ತಿತರರು ಭಾಗವಹಿಸಿದ್ದರು.

# ಕ್ರೀಡಾಪಟುಗಳು ಜನರಿಗೆ ಮಾದರಿ



ಮೈಸೂರು: ಕ್ರೀಡಾ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿನಿಯರು ಕ್ರೀಡೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿ ಸಾವಿರಾರು ಯುವ ಜನರಿಗೆ ಮಾದರಿಯಾಗಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಎಂ.ಎನ್ ಅನುಚೇತ್ ತಿಳಿಸಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಕ್ರೀಡಾ ವಸತಿನಿಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿಯರೊಂದಿಗೆ ವಸತಿನಿಲಯಗಳಲ್ಲಿ ದೊರಕುತ್ತಿರುವ ಆಹಾರ, ತರಬೇತಿ ಹಾಗೂ ಇನ್ನಿತರೆ ವ್ಯವಸ್ಥೆಗಳ ಬಗ್ಗೆ ಚರ್ಚಿಸಿದರು. ವಿದ್ಯಾರ್ಥಿನಿಯರೊಂದಿಗೆ ಊಟ ಮಾಡಿ ಆಹಾರದ ಗುಣಮಟ್ಟ ಪರಿಶೀಲಿಸಿದರು.

ವಸತಿ ನಿಲಯದಲ್ಲಿ ಸರ್ಕಾರ ನಿಗಧಿಪಡಿಸಿರುವ ರೀತಿ ಪ್ರತಿದಿನ ಉಪಹಾರ ಹಾಗೂ ಊಟದ ವ್ಯವಸ್ಥೆ ಇರಬೇಕು, ಕ್ರೀಡೆಯಲ್ಲಿ ಭಾಗವಹಿಸಲು ಊಟ ಹಾಗೂ ತರಬೇತಿ ಎರಡು ಮುಖ್ಯ ಅಂಶವಾಗಿರುತ್ತದೆ. ಯಾವುದೇ ರೀತಿಯ ಲೋಪವಾಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದರು.

ಕ್ರೀಡಾ ವಿಜ್ಞಾನ ಕ್ರೀಡಾಪಟುಗಳು ಅವರು ಆಯ್ಕೆ ಮಾಡುವ ಕ್ರೀಡೆಯಲ್ಲಿ ಅವರ ದೇಹವನ್ನು ಹೆಚ್ಚು ಶಕ್ತಿಶಾಲಿ ಮಾಡುವ ರೀತಿ ಉಪಯುಕ್ತವಾಗಿದೆ. ಕ್ರೀಡಾ ವೈಜ್ಞಾನಿಕ ತರಬೇತಿ ಕೇಂದ್ರದಲ್ಲಿ ಕ್ರೀಡಾಪಟುಗಳನ್ನು ಅವರ ಕ್ರೀಡೆಯ ಆಧಾರದ ಮೇಲೆ ಪರೀಕ್ಷಿಸಿ ಅವರ ದೇಹದ ಯಾವ ಭಾಗಕ್ಕೆ ಹೆಚ್ಚಿನ ವ್ಯಾಯಮ ಬೇಕು ಎಂಬುದನ್ನು ತಿಳಿದುಕೊಂಡು 3 ತಿಂಗಳ ಕಾಲ ತರಬೇತಿ ನೀಡಿ ಅವರ ದೇಹವನ್ನು ಬಲಿಷ್ಠಗೊಳಿಸುತ್ತದೆ. ಕ್ರೀಡಾ ವೈಜ್ಞಾನಿಕ ಕೇಂದ್ರವನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು. ಇದೇ ಸಂದರ್ಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ , ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಎಸ್. ಹೆಚ್.ನಿರ್ಮಲ ಸೇರಿ ಇತರರು ಉಪಸ್ಥಿತರಿದ್ದರು.

## ವರ್ತಕರು ಗುಣಾತ್ಮಕ ಸೇವೆ ನೀಡಿದರೆ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ

**ಚಾಮರಾಜನಗರ ವರ್ತಕರ ಸಂಘದ 60ನೇ ವಾರ್ಷಿಕೋತ್ಸವ, ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ**



ಚಾಮರಾಜನಗರ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವರ್ತಕರು ಗ್ರಾಹಕರಿಗೆ ಉತ್ತಮ ಗುಣಾತ್ಮಕ ಸೇವೆಯನ್ನು ನೀಡಿದರೆ ಮಾತ್ರ ಮಾರುಕಟ್ಟೆಯಲ್ಲಿ ದೀರ್ಘಕಾಲ ನೆಲಸಿ, ಯಶಸ್ಸು ಸಾಧಿಸಲು ಸಾಧ್ಯ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ನಿರ್ದೇಶಕ ಎ.ದಿನೇಶ್ ಹೇಳಿದರು.

ನಗರದ ವರ್ತಕರ ಭವನದಲ್ಲಿ ನಡೆದ ವರ್ತಕರ ಸಂಘದ 60ನೇ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ವರ್ತಕ ಬಂಧುಗಳು ಸಮಾಜದಲ್ಲಿ ಕೆಲಸ ಕಾರ್ಯಗಳನ್ನು ಮಾಡುವ ಜತೆಗೆ ತಾವೂ ಮಾಡುವ ವ್ಯವಹಾರದಲ್ಲಿ ಒಂದು ಭಾಗವನ್ನು ಸಾಮಾಜಿಕ ಸೇವೆಗೆ ಮೀಸಲಿಡಬೇಕು. ಸಂಘವು ಮತ್ತಷ್ಟು ಅಭಿವೃದ್ಧಿ ಹೊಂದಿ ಒಳ್ಳೆಯ ಕೆಲಸ ಮಾಡುವಂತಾಗಲಿ ಎಂದು ಶುಭ ಕೋರಿದರು.

ವರ್ತಕರು ದಿನನಿತ್ಯದ ಕೆಲಸ ಕಾರ್ಯದಲ್ಲಿ ಅನಿವಾರ್ಯ ಅಗತ್ಯ ಎನಿಸುವ ಎಲ್ಲ.. ಸಾಮಾಗ್ರಿಗಳನ್ನು ಮಾರಾಟ ವ್ಯವಸ್ಥೆ ವರ್ತಕರ ಮೂಲಕ ಪ್ರತಿನಿತ್ಯ ಕಾಣುತ್ತೇವೆ. ನಮ್ಮ ಬದುಕಿಗೆ ಅನಿವಾರ್ಯವಾಗಿರುವ ವರ್ತಕರು ಇಂದು ಸಂಘ ಕಟ್ಟಿಕೊಂಡ ಸಂಘದ 60ನೇ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವುದು ಒಂದು ಉತ್ತಮ... ಕೆಲಸವಾಗಿದೆ. ಪ್ರತಿವರ್ಷಕ್ಕೊಂದು ಬಾರಿ ವಾರ್ಷಿಕೋತ್ಸವ ಮಾಡುವ ಮೂಲಕ ವರ್ತಕರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಸಂಭ್ರಮಾಚರಣೆ ಮಾಡುತ್ತಿರುವುದು ಶ್ಲಾಘನೀಯವಾದದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ವರ್ತಕರು ಅನ್ನದಾತರು**

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಆರ್. ಪ್ರದೀಪ್ ದೀಕ್ಷಿತ್ ಮಾತನಾಡಿ, ಶ್ರೀಚಾಮರಾಜೇಶ್ವರ ದೇವಸ್ಥಾನಕ್ಕೆ ಒಂದು ಕಡೆ 200 ವರ್ಷ ಪೂರೈಸಿದರೆ, ಚಾಮರಾಜನಗರ ವರ್ತಕರ ಸಂಘವು 60 ವರ್ಷಗಳನ್ನು ಪೂರೈಸಿದೆ. ಸಂಘವು 1965 ರಲ್ಲಿ ಪ್ರಾರಂಭವಾಗಿ ಚಾಮರಾಜೇಶ್ವರನ ಧರ್ಮಶಾಲೆಯಲ್ಲಿ ವರ್ತಕರು ಒಗ್ಗೂಡಿ ಸಭೆ ಮಾಡಿ ಹಂತಹಂತವಾಗಿ ಸಂಘಟನೆ ಮಾಡಿ 1967ರಲ್ಲಿ ಸಂಘ ನೋಂದಣಿಯಾಗಿದ್ದು, ಚಾಮರಾಜನಗರದ ವರ್ತಕರು ಅನ್ನದಾತರು. ಏಕೆ ಎಂದರೆ ಮಹಾರಾಜರು ಚಾಮರಾಜೇಶ್ವರ ದೇವಸ್ಥಾನ ಸ್ಥಾಪನೆ ಮಾಡಬೇಕಾದರೆ ಶೃಂಗೇರಿ ಗುರುಗಳ ಹತ್ತಿರ ಹೋಗುತ್ತಾರಂತೆ. ಹೋದಂತಹ ಸಂದರ್ಭದಲ್ಲಿ ನೀನು ಸ್ಥಾಪನೆ ಮಾಡಿಲಿಕ್ಕೆ ಅಂದುಕೊಂಡಿರುವ ಲಿಂಗಬೇಡ. ನನ್ನ ಹತ್ತಿರ ಒಂದು ಲಿಂಗ ಇದೆ. ಅತಿ ಹೆಚ್ಚಾಗಿ ಅನ್ನದಾನ ನಡೆಯಬೇಕು. ಯತಿಯಾಗಿ, ಯೋಗಿಯಾಗಿ ನನ್ನಲ್ಲಿ ಆ ಶಕ್ತಿ ಇಲ್ಲ. ನೀನು ರಾಜನಾಗಿದ್ದೀಯಾ ಆ ಶಕ್ತಿ ನಿನ್ನಲ್ಲಿ ಇದೆ. ಆಗಾಗಿ ಈ ಲಿಂಗವನ್ನು ತೆಗೆದುಕೊಂಡಿ ಹೋಗಿ ಹೆಚ್ಚಾಗಿ ಅನ್ನದಾನ ಮಾಡುವಂತೆ ಹೇಳಿದ್ದಾರೆ ಎಂದು ಹಿರಿಯರು ಹೇಳುತ್ತಾರೆ ಎಂದರು.

**ಪ್ರತಿಭಾ ಪುರಸ್ಕಾರ**

ಎಸ್ ಎಸ್ ಎಲ್ ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಪಡೆದ ವರ್ತಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ವರ್ತಕರ ಸಂಘದ ಅಧ್ಯಕ್ಷ ಎನ್.ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ವರ್ತಕರ ಸಂಘದ ಗೌರವ ಕಾರ್ಯದರ್ಶಿ ಕೆ.ಎಸ್. ಚಿದಾನಂದ ಗಣೇಶ, ಉಪಾಧ್ಯಕ್ಷ ಎಂ.ರಾಜಣ್ಣ, ಸಹ ಕಾರ್ಯದರ್ಶಿ ಎಂ.ಕಮಲ್ ರಾಜ್, ಖಜಾಂಚಿ ಹೆಚ್.ವಿ.ವಿಶ್ವಕುಮಾರಸ್ವಾಮಿ ಹಾಗೂ 2025-26ನೇ ಸಾಲಿನ ಕಾರ್ಯನಿರ್ವಾಹಕ ಮಂಡಳಿ ನಿರ್ದೇಶಕರು, ಮಾಜಿ ಅಧ್ಯಕ್ಷರು, ವರ್ತಕರ ಕುಟುಂಬದವರು ಭಾಗವಹಿಸಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನಾಳೆ ಶ್ರೀ ಚಾಮರಾಜೇಶ್ವರ ರಥೋತ್ಸವ

## ಬಿಗಿ ಪೊಲೀಸ್ ಬಂದೋಬಸ್ತ್, ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮ

ಚಾಮರಾಜನಗರ: ನಗರದ ಐತಿಹಾಸಿಕ ಶ್ರೀ ಚಾಮರಾಜೇಶ್ವರ ಆಷಾಢ ರಥೋತ್ಸವ ಹಾಗೂ ಜಾತ್ರೆಯು ಜುಲೈ 28 ರಂದು ನಡೆಯಲಿದ್ದು , ಈ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸದಂತೆ ಪೊಲೀಸ್ ಇಲಾಖೆಯಿಂದ ಅಗತ್ಯ ಹಾಗೂ ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

**ಭಾರಿ ಪೊಲೀಸ್ ಪಡೆ ನಿಯೋಜನೆ**

ರಥೋತ್ಸವದ ಬಂದೋಬಸ್ತ್ ಕರ್ತವ್ಯಕ್ಕಾಗಿ 04 ಡಿಎಸ್ಪಿ, 11 ಪೊಲೀಸ್ ಇನ್ಸ್ಪೆಕ್ಟರ್, 22 ಸಬ್ ಇನ್ಸ್ಪೆಕ್ಟರ್, 47 ಎಎಸ್ಐ, 270 ಪೊಲೀಸರು, 100 ಗೃಹರಕ್ಷಕ ದಳದ ಸಿಬ್ಬಂದಿ, 02 ಕೆ.ಎಸ್.ಆರ್.ಪಿ ಹಾಗೂ 04 ಡಿ.ಎ.ಆರ್. ತುಕಡಿಗಳನ್ನು ನಿಯೋಜಿಸಲಾಗಿದೆ. ಇದರೊಂದಿಗೆ ಒಂದು ಕಮಾಂಡೋ ಪಡೆಯನ್ನು ಸಹ ಕಣಕ್ಕಿಳಿಸಲಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ನಗರದಾದ್ಯಂತ ಒಟ್ಟು 07 ಪ್ರಮುಖ ಸ್ಥಳಗಳಲ್ಲಿ 'ಚೀತಾ' ಗಸ್ತು ಪಡೆ ಕಾರ್ಯ ನಿರ್ವಹಿಸಲಿದೆ.



### ಮಹಿಳೆಯರ ಸುರಕ್ಷತೆಗೆ 'ಅಕ್ಕಪಡೆ' ಹಾಗೂ ಮಫ್ತಿ ಪಡೆ

ಜಾತ್ರೆಗೆ ಆಗಮಿಸುವ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಈವ್ ಟೀಸಿಂಗ್ ಮಾಡುವ ಪುಂಡರ ಹಾವಳಿ ತಡೆಯಲು ಪ್ರತ್ಯೇಕ ತಂಡ ಹಾಗೂ "ಅಕ್ಕಪಡೆಯ" ಅಧಿಕಾರಿ-ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಈವ್ ಟೀಸಿಂಗ್ ನಡೆಸುವುದು ಕಂಡುಬಂದಲ್ಲಿ ಅಂತವರ ವಿರುದ್ಧ ತಕ್ಷಣವೇ ಕಾನೂನು ಕ್ರಮ ಜರುಗಿಸಲಾಗುವುದು. ಅಲ್ಲದೆ, ಜಾತ್ರೆಯ ಸಂದರ್ಭದಲ್ಲಿ ಸರಗಳ್ಳತನ, ವಂಚನೆ ಮತ್ತು ಗಮನ ಬೇರೆಡೆ ಸೆಳೆದು ಆಭರಣ ದೋಚುವ ಪ್ರಕರಣಗಳು ನಡೆಯುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಕೋರಲಾಗಿದೆ. ಇಂತಹ ಕೃತ್ಯಗಳನ್ನು ತಡೆಯಲು ಮತ್ತು ಹಳೆಯ ಅಪರಾಧಿಗಳು (ಒಓಬಿ ಆಸಾಮಿಗಳು) ಹಾಗೂ ಚಾಳಿ ಬಿದ್ದ ಕಳ್ಳರ ಮೇಲೆ ನಿಗಾವಹಿಸಲು ನುರಿತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಮಫ್ತಿ ಪಡೆಗಳನ್ನು ಕಾರ್ಯಾಚರಣೆಗೆ ಇಳಿಸಲಾಗಿದೆ.

### ಕರ್ಕಶ ಶಬ್ದ ಉಂಟುಮಾಡುವ ಸಾಧನಗಳ ಮಾರಾಟ ನಿಷೇಧ

ಜಾತ್ರೆಯು ಸುಗಮವಾಗಿ ನಡೆಯುವ ಹಿತದೃಷ್ಟಿಯಿಂದ ಕರ್ಕಶ ಶಬ್ದ ಉಂಟುಮಾಡುವ ಸಾಧನಗಳನ್ನು ಮಾರಾಟ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ದೇವಸ್ಥಾನದ ಅಕ್ಕಪಕ್ಕದಲ್ಲಿರುವ ಹಾಗೂ ನಗರದ ಇತರೆ ಭಾಗಗಳ ಅಂಗಡಿ ಮುಂಗಟ್ಟುಗಳವರು ಯಾವುದೇ ಕಾರಣಕ್ಕೂ ಕರ್ಕಶ ಶಬ್ದ ಬರುವ ಸಾಧನಗಳನ್ನು ಮಾರಾಟ ಮಾಡುವಂತಿಲ್ಲ. ನಿಯಮ ಮೀರಿ ಮಾರಾಟ ಮಾಡುವುದು ಕಂಡುಬಂದಲ್ಲಿ ತಕ್ಷಣವೇ ಸೂಕ್ತ ಕ್ರಮ ಜರುಗಿಸಲಾಗುವುದು.

### ವಾಹನ ಸಂಚಾರ ನಿಷೇಧ ಹಾಗೂ ಪಾರ್ಕಿಂಗ್ ವ್ಯವಸ್ಥೆ

ಜುಲೈ 28 ರಂದು ಬೆಳಿಗ್ಗೆ 6 ಗಂಟೆಯಿಂದಲೇ ದೇವಸ್ಥಾನದ ಸುತ್ತಮುತ್ತ ಹಾಗೂ ರಥೋತ್ಸವ ಸಾಗುವ ಮಾರ್ಗದಲ್ಲಿ ವಾಹನಗಳ ಸಂಚಾರ ಮತ್ತು ವಾಹನ ಪಾರ್ಕಿಂಗ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ:

**ಗುಂಡ್ಲುಪೇಟೆ, ನಂಜನಗೂಡು ಹಾಗೂ ತಮಿಳುನಾಡಿನ ಸತ್ತಿ ಕಡೆಯಿಂದ ಬರುವ ವಾಹನಗಳು:**

ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದ ಪಕ್ಕದಲ್ಲಿರುವ ಖಾಸಗಿ ಬಸ್ ನಿಲ್ದಾಣದಲ್ಲಿ ಪಾರ್ಕಿಂಗ್ ಮಾಡಬೇಕು.

**ಕೊಳ್ಳೇಗಾಲ, ಟಿ. ನರಸೀಪುರ ಹಾಗೂ ಚಂದಕವಾಡಿ ಕಡೆಯಿಂದ ಬರುವ ವಾಹನಗಳು:**

ಪಚ್ಚಪ್ಪ ಸರ್ಕಲ್ ಬಳಿ ಇರುವ ಸರ್ಕಾರಿ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ತಮ್ಮ ವಾಹನಗಳನ್ನು ಪಾರ್ಕಿಂಗ್ ಮಾಡಬಹುದಾಗಿದೆ.

**ಸಿ.ಸಿ. ಕ್ಯಾಮೆರಾ ಹಾಗೂ ಕಮಾಂಡೆಂಟ್ ಸೆಂಟರ್ ವೀಕ್ಷಣೆ**

ಜಾತ್ರೆಯಲ್ಲಿ ಕಳ್ಳತನ ಮತ್ತು ಅಹಿತಕರ ಘಟನೆಗಳನ್ನು ಸಮರ್ಪಕವಾಗಿ ತಡೆಗಟ್ಟಲು ರಥೋತ್ಸವ ಸಾಗುವ ಮಾರ್ಗ ಹಾಗೂ ಹೆಚ್ಚು ಜನಸಂದಣಿ ಇರುವ ಪ್ರದೇಶಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸಾರ್ವಜನಿಕರ ಪ್ರತಿಯೊಂದು ಚಲನವಲನಗಳನ್ನು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ತೆರೆಯಲಾಗಿರುವ ಪೊಲೀಸ್ ಕಮಾಂಡೆಂಟ್ ಸೆಂಟರ್ ಮೂಲಕ ಸೂಕ್ಷ್ಮವಾಗಿ ವೀಕ್ಷಿಸಲಾಗುತ್ತದೆ.


### ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಭದ್ರತೆ

ಈ ಸಂಪೂರ್ಣ ಬಂದೋಬಸ್ತ್ ವ್ಯವಸ್ಥೆಯ ಉಸ್ತುವಾರಿಯನ್ನು ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಮುತ್ತುರಾಜು.ಎಂ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಎಂ.ಎನ್. ಶಶಿಧರ, ಚಾಮರಾಜನಗರ ಉಪವಿಭಾಗದ ಉಪಾಧೀಕ್ಷಕರಾದ ಎನ್. ಸ್ನೇಹರಾಜ್ ಹಾಗೂ ಕೊಳ್ಳೇಗಾಲ ಉಪವಿಭಾಗದ ಉಪಾಧೀಕ್ಷಕರಾದ ಜೆ. ಮೋಹನ್ ಅವರ ನೇತೃತ್ವದಲ್ಲಿ ವಹಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆಯ ಪತ್ರಿಕಾ ಪ್ರಕಟಣೆ ತಿಳಿಸಿದೆ.

## ಜೆಡಿಎಸ್ ಕಚೇರಿಯಲ್ಲಿ ಚೆನ್ನಮ್ಮ ಅವರಿಗೆ ನಮನ

ಮೈಸೂರು: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಪತ್ನಿ ದಿ.ಚೆನ್ನಮ್ಮ ಅವರಿಗೆ ಜೆಡಿಎಸ್ ಕಚೇರಿಯಲ್ಲಿ ಭಾವಪೂರ್ಣ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ನಗರಾಧ್ಯಕ್ಷ ಎಸ್.ಬಿ.ಎಂ.ಮಂಜು, ಮಾಜಿ ಮೇಯರ್ ಗಳಾದ ಆರ್.ಲಿಂಗಪ್ಪ, ಎಂ.ಜೆ. ರವಿಕುಮಾರ್, ಭಾಗ್ಯವತಿ, ನಗರಪಾಲಿಕೆ ಮಾಜಿ ಸದಸ್ಯರಾದ ಬಾಲಣ್ಣ, ರಮಣಿ ರಮೇಶ್, ಶಿವಣ್ಣ, ಜೆಡಿಎಸ್ ಮುಖಂಡರಾದ ಅಶೋಕ, ಫಾಲ್ಕನ್ ಬೋರೇಗೌಡ, ಎಸ್ಸಿ ಎಸ್ಟಿ ಅಧ್ಯಕ್ಷ ಪ್ರಕಾಶ್, ಮಹಿಳಾ ಅಧ್ಯಕ್ಷೆ ಹೇಮಾವತಿ, ಚಾಮರಾಜ ಅಧ್ಯಕ್ಷ ಚಂದ್ರ, ಯುವ ಜನತಾದಳ ಅಧ್ಯಕ್ಷ ಮದನ್, ನಗರ ವಕ್ತಾರ ರಾಮು ಇನ್ನಿತರರು ಇದ್ದರು.




# ಪೌರಕಾರ್ಮಿಕರಿಗೆ ಆಯೋಗದಿಂದ ನ್ಯಾಯ




**ಮೈಸೂರು:** ಪೌರಕಾರ್ಮಿಕರ ಎಲ್ಲಾ ಸಂಕಷ್ಟಗಳಿಗೆ ಆಯೋಗವು ನ್ಯಾಯ ದೊರಕಿಸಿಕೊಡಲಿದ್ದು, ಪೌರಕಾರ್ಮಿಕರು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಸೇರಿಸಿ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಸದಸ್ಯರಾದ ಸಿ.ಶಂಕರ ಅಂಕನಶೆಟ್ಟಿಪುರ ತಿಳಿಸಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಪೌರಕಾರ್ಮಿಕರು ಹಾಗೂ ಅಧಿಕಾರಿಗಳೊಡನೆ ಸೋಮವಾರ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾನು ಪೌರಕಾರ್ಮಿಕರ ಮಗನಾಗಿದ್ದು, ಶಿಕ್ಷಣದಿಂದಲೇ ಈ ಪದವಿಯಲ್ಲಿದ್ದೇನೆ. ಇದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನವೇ ಪ್ರಮುಖ ಕಾರಣ ಎಂದು ಹೇಳಿದರು.

ಗ್ರಾಮದ ಪ್ರತೀ ಬೀದಿಗಳನ್ನು ಸ್ವಚ್ಛಗೊಳಿಸಿ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಲ್ಲಿ ಪೌರಕಾರ್ಮಿಕರ ಪಾತ್ರ ಮಹತ್ವವಾಗಿದೆ. ಅವರಿಂದಲೇ ನಾವೆಲ್ಲರೂ ಆರೋಗ್ಯವಾಗಿದ್ದೇವೆ. ಆದ್ದರಿಂದ ಗ್ರಾಮ ಪಂಚಾಯಿತಿಗಳಲ್ಲಿ ಸೇವೆ ಸಲ್ಲಿಸುವ ಪೌರಕಾರ್ಮಿಕರನ್ನು ಗೌರವಯುತವಾಗಿ ನಡೆಸಿಕೊಳ್ಳಿ, ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಡಿ ಪೌರಕಾರ್ಮಿಕರಿಗೆ ಮಾಸಿಕ ವೇತನ ನೀಡಬೇಕು. ಅವರ ಆರೋಗ್ಯದ ಹಿತದೃಷ್ಟಿಯಿಂದ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಸಬೇಕು. ಕರ್ತವ್ಯದ ಸಂದರ್ಭದಲ್ಲಿ ಮಾಸ್ಕ್, ಗ್ಲೌಸ್ ಸೇರಿದಂತೆ ಸುರಕ್ಷಿತಾ ಪರಿಕರಗಳನ್ನು ಒದಗಿಸಿಕೊಡಬೇಕು ಎಂದು ಸೂಚಿಸಿದರು.

ಮಧ್ಯವರ್ತಿಗಳು, ಸಂಘ ಸಂಸ್ಥೆಗಳ ನಿಮಗೆ ಕೆಲಸ ಕೊಡಿಸುವುದಾಗಿ ಭರವಸೆ ನೀಡಿ ಹಣಕ್ಕೆ ಬೇಡಿಕೆಯಿಟ್ಟರೆ ಆಯೋಗಕ್ಕೆ ಹಾಗೂ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಬೇಕು. ಕೆಲಸದ ಅಗತ್ಯವಿದ್ದರೆ ನೇರವಾಗಿ ಅಧಿಕಾರಿಗಳಿಗೆ ಮನವಿ ಸಲ್ಲಿಕೆ ಮಾಡಬೇಕು ಎಂದು ಹೇಳಿದರು. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ ಮಾತನಾಡಿ, ಸರ್ಕಾರದ ನಿರ್ದೇಶನದ ಪ್ರಕಾರ ಯಾವುದೇ ಸಿಬ್ಬಂದಿಯನ್ನು ಗ್ರಾಮ ಪಂಚಾಯಿತಿ ನೇಮಕ ಮಾಡಿಕೊಳ್ಳುವುದಿಲ್ಲ. ನಿಮಗೆ ಖಾಯಂ ಕೆಲಸ ಕೊಡಿಸುವುದಾಗಿ ವಂಚಕರು ಪೀಡಿಸಿದರೆ ನೇರವಾಗಿ ನಮಗೆ ದೂರು ನೀಡಬೇಕು. ಹಣ ಕೊಟ್ಟು ಮೋಸಹೋಗಬಾರದು ಎಂದು ಹೇಳಿದರು. ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಜನಾರ್ಧನ್, ತಾ.ಪಂ. ಯೋಜನಾಧಿಕಾರಿ ಸುರೇಶ್ ಇತರರು ಉಪಸ್ಥಿತರಿದ್ದರು.

# ಲೈಂಗಿಕ ದೌರ್ಜನ್ಯ ನಡೆದರೆ ದೂರು ಕೊಡಿ



**ರಾಮನಗರ:** ಲೈಂಗಿಕ ದೌರ್ಜನ್ಯದ ವಿರುದ್ದ ಪೊಲೀಸರಿಗೆ ದೂರು ನೀಡಬೇಕು. ಈ ವಿಚಾರದಲ್ಲಿ ಜಾರಿಯಲ್ಲಿರುವ ಕಾನೂನಿನ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ದೂರು ನೀಡಿದರೆ ಮಾತ್ರ ನಿರ್ಧಾಕ್ಷಿಣ್ಯವಾಗಿ ಕಠಿಣ ಶಿಕ್ಷೆ ವಿಧಿಸಲು ಸಾಧ್ಯ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಲೋಕೇಶ್ ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ರಾಮನಗರ ಬಿಜಿಎಸ್ ಪದವಿಪೂರ್ವ ಕಾಲೇಜ್ ರವರ ಸಂಯುಕ್ತಾಶ್ರಯದಲ್ಲಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಲೈಂಗಿಕ ದೌರ್ಜನ್ಯ, ಮಕ್ಕಳ ಸಂರಕ್ಷಣಾ ಕಾಯ್ದೆ 2012, ಪೋಕ್ಸೋ ಕಾಯ್ದೆ ವಿಚಾರದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯರು, ಯುವತಿಯರು ಮತ್ತು ಮಕ್ಕಳಿಗಾಗಿ ಇರುವ ಕಾನೂನು ಬಗ್ಗೆ ತಿಳುವಳಿಕೆ ಇರಲಿ ಎಂದು ಕರೆ ನೀಡಿದರು.

**ಅಶ್ಲೀಲ ಚಿತ್ರ ಕಳುಹಿಸಿದರು ದೂರು ಕೊಡಿ - ಜಯರಾಮ್**

ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಜಯರಾಮ್ ಮಾತನಾಡುತ್ತಾ ನಿಮಗೆ ಯಾರಾದರೂ ಅಶ್ಲೀಲ ಚಿತ್ರಗಳನ್ನು ಕಳುಹಿಸಿದರೆ, ಕೆಟ್ಟ ಸ್ಪರ್ಶ ಮಾಡಿದರೆ, ಲೈಂಗಿಕ ಪ್ರಚೋದನೆ ಮಾಡಿದರೆ ನೇರವಾಗಿ ಪೊಲೀಸರ ಬಳಿ ದೂರು ಕೊಡಿ, ಈ ವಿಚಾರದಲ್ಲಿ ಹಿಂಜರಿಯಬೇಡಿ ಎಂದರು.

ಪ್ಯಾನಲ್ ವಕೀಲರಾದ ಲಕ್ಷ್ಮಮ್ಮ ಅವರು ಮಾತನಾಡಿ, ಪೋಕ್ಸೋ ಕಾಯ್ದೆ ಬಗ್ಗೆ ಮಾಹಿತಿ ಕೊಟ್ಟರು. ತಪ್ಪಿತಸ್ಥರಿಗೆ ಕನಿಷ್ಠ 10 ವರ್ಷ ಶಿಕ್ಷೆ ಅಥವಾ ಗರಿಷ್ಠ ಮರಣದಂಡನೆಯವರಿಗೆ ಶಿಕ್ಷೆ ವಿಧಿಸಬಹುದಾಗಿದೆ ಎಂದರು. ಬಿಜಿಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಸುರೇಶ್ ಎಂ .ಸಿ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

**ಗಣೇಶನ ಗುಡಿ ವೃತ್ತದಲ್ಲಿ ಬಾರ್ ಆರಂಭ**

# ಬೆಟ್ಟದ ತಪ್ಪಲಿನ ಬಾರ್ ತೆರವಿಗೆ ಪ್ರತಿಭಟನೆ



ಸರಗೂರು: ತಾಲೂಕಿನ ಅಧಿದೇವತೆ ಶ್ರೀ ಚಿಕ್ಕ ದೇವಮ್ಮನ ಸನ್ನಿಧಿ ಹಾಗೂ ಹಾಲುಗಡ ಸಮೀಪದ ಗಣೇಶನ ಗುಡಿ ವೃತ್ತದಲ್ಲಿ ಆರಂಭಿಸಲಾಗಿರುವ ಎಂಕೆಪಿ ಬಾರ್ ಅನ್ನು ತಕ್ಷಣವೇ ತೆರವು ಗೊಳಿಸಬೇಕೆಂದು ಆಗ್ರಹಿಸಿ ಇಟ್ನ ಗ್ರಾಮಸ್ಥರು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳು ಜಂಟಿಯಾಗಿ ತಾಲೂಕು ಆಡಳಿತದ ವಿರುದ್ಧ ಬೃಹತ್ ಉಗ್ರ ಪ್ರತಿಭಟನೆ ನಡೆಸಿದರು.

ಧಾರ್ಮಿಕ ಕ್ಷೇತ್ರದ ಸಮೀಪ ಬಾರ್ ತೆರೆಯಲಾಗಿರುವುದರಿಂದ ಭಕ್ತರ ಧಾರ್ಮಿಕ ಭಾವನೆ ಗಳಿಗೆ ಧಕ್ಕೆಯಾಗುತ್ತಿದೆ. ಅಲ್ಲದೆ ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕಾನೂನು ಸುವ್ಯವಸ್ಥೆಗೂ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಬಾರ್ಗೆ ನೀಡಿರುವ ಅನುಮತಿಯನ್ನು ತಕ್ಷಣವೇ ರದ್ದುಪಡಿಸಿ, ಎಂಕೆಪಿ ಬಾರ್ ಅನ್ನು ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದ ಪ್ರತಿಭಟನಾಕಾರರು ತಾಲೂಕು ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಮಾಜಿ ಜಿಪಂ ಸದಸ್ಯ ಚಿಕ್ಕವೀರನಾಯಕ, ಎಚ್ ಸಿ ಲಕ್ಷ್ಮಣ್,ಉದ್ಯಮಿ ನಿಂಗರಾಜು, ಸರಗೂರು ಶಿವಣ್ಣ,ಮೋತ್ತ ಬಸವರಾಜಪ್ಪ, ಮಾಜಿ ಪುರಸಭೆ ಅಧ್ಯಕ್ಷ ಚಾಕಹಳ್ಳಿ ಕೃಷ್ಣ, ವಕೀಲರು ರವಿ,ಸಿ ವಿ ನಾಗರಾಜು, ದೇವಸ್ಥಾನ ಸಮಿತಿ ಅಧ್ಯಕ್ಷ ದೊಡ್ಡ ವೀರ ನಾಯಕ,ಬಿಜೆಪಿ ತಾಲೂಕು ಅಧ್ಯಕ್ಷರಾದ ಸಿ ಕೆ ಗಿರೀಶ್, ವೆಂಕಟೇಶ್, ಮಂಜುನಾಥ, ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ಸರಗೂರು ಕೃಷ್ಣ, ಪುರದಕಟ್ಟೆ ಬೆಟ್ಟನಾಯಕ,ಸಾಗರೆ ಶಂಕರ್, ವಾಲ್ಮೀಕಿ ಸಿದ್ದರಾಜು, ಗ್ರಾಪಂ ಸದಸ್ಯ ಜಯರಾಮ್,ಇಟ್ನ ಯಜಮಾನರು ನಿಂಗರಾಜು,ಚಿನ್ನನಾಯಕ, ಮುಖಂಡರು ಬಸವನಾಯಕ, ಬಿ ಬಸವರಾಜು,ಚಾಮನಾಯಕ,ಕಾಳಲಿಂಗನಾಯಕ, ರವಿಕುಮಾರ್,ಪ್ರತಿಭಟನೆಯಲ್ಲಿ ಅಕ್ಕಪಕ್ಕದ ಗ್ರಾಮಸ್ಥರು, ವಿವಿಧ ಸಂಘಟನೆಗಳ ಮುಖಂಡರು, ಮಹಿಳೆಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು, ವಿವಿಧ ಸಂಘಟನೆಗಳ ಮುಖಂಡರು, ಮಹಿಳೆಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ವ್ಯಾಯಾಮ ಆರೋಗ್ಯಕರ ಜೀವನಶೈಲಿಯನ್ನು ರೂಪಿಸುತ್ತೆ: ಪಿ. ರವಿಕುಮಾರ್



**ಮಂಡ್ಯ:** ಜೀವನಶೈಲಿಯಲ್ಲಿ ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ. ನಾವು ಸೇವಿಸುವ ಆಹಾರ ಪದ್ಧತಿ, ದೈಹಿಕ ಚಟುವಟಿಕೆ ಹಾಗೂ ದಿನನಿತ್ಯದ ಜೀವನಶೈಲಿ ನಮ್ಮ ಆರೋಗ್ಯವನ್ನು ನಿರ್ಧರಿಸುತ್ತವೆ. ಆದ್ದರಿಂದ ಪೌಷ್ಟಿಕ ಆಹಾರ ಸೇವನೆ, ನಿಯಮಿತ ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಪ್ರತಿಯೊಬ್ಬರೂ ರೂಡಿಸಿಕೊಳ್ಳಬೇಕು ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ. ರವಿ ಕುಮಾರ್ ತಿಳಿಸಿದರು.

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್ ಹಾಗೂ ಆದಿಚುಂಚನಗಿರಿ ಆಸ್ಪತ್ರೆ, ಬಿ.ಜಿ.ನಗರ, ನಾಗಮಂಗಲ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಂಡ್ಯ, ಮ0ಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಹಾಗೂ ಕಿದ್ವಾಯಿ ಸಂಸ್ಥೆ, ಬೆಂಗಳೂರು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಇವರುಗಳ ಸಹಯೋಗದೊಂದಿಗೆ ಕೆರೆಗೋಡು ಎಜುಕೇಶನ್ ಸೊಸೈಟಿ (ರಿ) ಕೆರೆಗೋಡು ಗ್ರಾಮಾಂತರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ತಜ್ಞ ವೈದ್ಯಾಧಿಕಾರಿಗಳ ತಂಡದಿಂದ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಾರ್ವಜನಿಕರ ಆರೋಗ್ಯಕ್ಕೆ ಸರ್ಕಾರ ವಿಶೇಷ ಆದ್ಯತೆ ನೀಡಿದ್ದು, ಜಿಲ್ಲೆಯಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸಿ, ಎಲ್ಲ ಜನರಿಗೆ ಉಚಿತ ಆರೋಗ್ಯ ತಪಾಸಣೆ, ತಜ್ಞ ವೈದ್ಯರ ಸಲಹೆ, ಅಗತ್ಯ ಔಷಧೋಪಚಾರ ಹಾಗೂ ಆರೋಗ್ಯ ಜಾಗೃತಿ ಸೇವೆಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ಪ್ರಾರಂಭಿಕ ಹಂತದಲ್ಲೇ ರೋಗಗಳನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣವೇ ಪ್ರಮುಖ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲೆಯ ನಾಲೆಗಳ ಅಭಿವೃದ್ಧಿಗಾಗಿ ಸುಮಾರು ?300 ಕೋಟಿ ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದ್ದು, ರೈತರಿಗೆ ಸಮರ್ಪಕ ನೀರಾವರಿ ಸೌಲಭ್ಯ ಕಲ್ಪಿಸುವ ಮೂಲಕ ಕೃಷಿ ಉತ್ಪಾದಕತೆ ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು. ಇದೇ ವೇಳೆ, ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವ ಹೊಂದಿರುವ ಕೆರೆಗೋಡು ಪಂಚಾಲಿಂಗೇಶ್ವರ ದೇವಸ್ಥಾನದ ಅಭಿವೃದ್ಧಿಗೆ ?10 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಕ್ಷೇತ್ರವನ್ನು ಧಾರ್ಮಿಕ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ ರೂಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳಾದ ಡಾ ಕುಮಾರ ಅವರು ಗ್ರಾಮೀಣ ಪ್ರದೇಶದ ಜನರಿಗೆ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲ ವ್ಯಾಯಾಮ, ಸಮತೋಲಿತ ಆಹಾರ, ಸರಿಯಾದ ನಿದ್ರೆ ಮತ್ತು ಒತ್ತಡ ನಿರ್ವಹಣೆ ಅತ್ಯಂತ ಅವಶ್ಯಕವಾಗಿದೆ ಎಂದು ಅವರು ತಿಳಿಸಿದರು.

ಆರೋಗ್ಯ ತಪಾಸಣೆ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಸದುಪಯೋಗಪಡಿಸಿಕೊಳ್ಳುವುದು ಅತ್ಯಂತ ಮುಖ್ಯ. ಇದು ರೋಗಗಳು ಬರುವುದನ್ನು ಮುಂಚಿತವಾಗಿ ತಡೆಯಲು, ಮಧುಮೇಹ, ಅಧಿಕ ರಕ್ತದೊತ್ತಡದಂತಹ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ಗುಣಪಡಿಸಲು ಹಾಗೂ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ ಎಂದು ಅವರು ತಿಳಿಸಿದರು.

ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಗಳಾದ ಕೆ. ಆರ್. ನಂದಿನಿ ರವರು ಮಾತನಾಡಿ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ವಿಶೇಷವಾಗಿ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ, ಪ್ರತಿದಿನ ಕನಿಷ್ಠ 30 ನಿಮಿಷಗಳ ಕಾಲ ನಿಯಮಿತವಾಗಿ ವ್ಯಾಯಾಮ ಮಾಡುವ ಮೂಲಕ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ಸಮತೋಲಿತ ಆಹಾರ ಸೇವನೆ, ಯೋಗ, ವಾಕಿಂಗ್, ದೈಹಿಕ ಚಟುವಟಿಕೆ ಹಾಗೂ ನಿಯಮಿತ ಆರೋಗ್ಯ ತಪಾಸಣೆಗಳನ್ನು ಜೀವನದ ಭಾಗವಾಗಿಸಿಕೊಳ್ಳುವುದು ಅಗತ್ಯವಾಗಿದೆ. ಇದರಿಂದ ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳು ಸೇರಿದಂತೆ ಹಲವು ಅಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

ಆರೋಗ್ಯವೇ ನಿಜವಾದ ಸಂಪತ್ತು. ಆದ್ದರಿಂದ ಮಹಿಳೆಯರು ಕುಟುಂಬದ ಆರೋಗ್ಯದ ಜೊತೆಗೆ ತಮ್ಮ ಸ್ವಂತ ಆರೋಗ್ಯಕ್ಕೂ ಆದ್ಯತೆ ನೀಡಿ, ಪ್ರತಿದಿನ ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕು ಎಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಪೀಠಾಧ್ಯಕ್ಷರಾದ ಪರಮ ಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿರವರು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ "ಉತ್ತಮ ಆರೋಗ್ಯವೇ ಉತ್ತಮ ಜೀವನದ ಅಡಿಪಾಯ. ಮನಸ್ಸು ಆರೋಗ್ಯಕರವಾಗಿದ್ದರೆ ದೇಹವೂ ಆರೋಗ್ಯಕರವಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಸಮಾನ ಕಾಳಜಿ ವಹಿಸಬೇಕು. ವಿಶೇಷವಾಗಿ ಹೃದಯ ಸಂಬಂಧಿತ ಕಾಯಿಲೆಗಳ ಲಕ್ಷಣಗಳು ಕಂಡುಬಂದ ತಕ್ಷಣವೇ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯಂತ ಅಗತ್ಯ. ಪ್ರಾರಂಭಿಕ ಹಂತದಲ್ಲಿಯೇ ರೋಗ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆದರೆ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ಗುಣಪಡಿಸಬಹುದು ಎಂದರು

ಬೆಳ್ಳೂರು ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಹೃದಯ ಕಾಯಿಲೆ ಸೇರಿದಂತೆ ವಿವಿಧ ರೀತಿಯ ಕಾಯಿಲೆಗಳಿಗೆ ಆಧುನಿಕ ವೈದ್ಯಕೀಯ ಸೌಲಭ್ಯಗಳು ಹಾಗೂ ಪರಿಣಿತ ವೈದ್ಯರ ಸೇವೆ ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಆರೋಗ್ಯ ಸಮಸ್ಯೆಯನ್ನು ನಿರ್ಲಕ್ಷಿಸದೆ ಸಮಯಕ್ಕೆ ಸರಿಯಾಗಿ ವೈದ್ಯರನ್ನು ಸಂಪರ್ಕಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಶಿಸ್ತು ಪಾಲಿಸಿ, ಸಮತೋಲನಯುತ ಪೌಷ್ಟಿಕ ಆಹಾರ ಸೇವನೆ, ನಿಯಮಿತ ವ್ಯಾಯಾಮ, ಸಮರ್ಪಕ ನಿದ್ರೆ ಹಾಗೂ ಒತ್ತಡರಹಿತ ಜೀವನಶೈಲಿಯನ್ನು ಅಳವಡಿಸಿಕೊಂಡರೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ. ಆರೋಗ್ಯದ ಬಗ್ಗೆ ಜಾಗೃತಿ, ಮುನ್ನೆಚ್ಚರಿಕೆ ಮತ್ತು ಸಮಯೋಚಿತ ಚಿಕಿತ್ಸೆ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿರವರು ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿದ್ದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ ಶಿವಾನಂದಮೂರ್ತಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ನರಸಿಂಹಮೂರ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಬೆಟ್ಟಸ್ವಾಮಿ, ಮಂಡ್ಯ ಉಪವಿಭಾಗಾಧಿಕಾರಿಗಳಾದ ಶಿವಮೂರ್ತಿ ಎಂ. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷರಾದ ಮೀರಾ ಶಿವಲಿಂಗಯ್ಯ, ಕೆರೆಗೋಡು ಎಜುಕೇಶನ್ ಸೊಸೈಟಿಯ ಅಧ್ಯಕ್ಷರಾದ ವಸಂತರಾಜು. ಜಿ.,ಕೆರೆಗೋಡು ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿಗಳಾದ ಜಿ. ರಾಮಲಿಂಗೇಗೌಡ ರವರು ಉಪಸ್ಥಿತರಿದ್ದರು.

# ಜು.31ರಂದು ಮದ್ದೂರಿನಲ್ಲಿ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರ ಸಭೆ

**ಮಂಡ್ಯ:** ಅಖಿಲ ಭಾರತ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ವೆಂಕಟ್ ಅವರು ಜು.31ರಂದು ಮದ್ದೂರು ತಾಲೂಕಿನ ಭಾರತಿ ನಗರದ ಸಿರಿ ಕನ್ವೆಂಷನ್ ಹಾಲ್‌ನಲ್ಲಿ ಸಂಘದ ಕಾರ್ಯಕರ್ತರ ಸಭೆ ನಡೆಸಲಿದ್ದಾರೆ ಎಂದು ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಹನುಮೇಶ್ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯಲ್ಲಿ ರಾಷ್ಟ್ರದಲ್ಲಾಗುತ್ತಿರುವ ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆ ಇದರಿಂದ ಕೂಲಿಕಾರರ ಮೇಲೆ ಬೀರುತ್ತಿರುವ ಪರಿಣಾಮಗಳ ಕುರಿತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಾತನಾಡಲಿದ್ದಾರೆ ಎಂದರು.

ಸಭೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟಮಾದು, ರಾಜ್ಯ ಹಿರಿಯ ಉಪಾಧ್ಯಕ್ಷ ಜಿ.ಎನ್.ನಾಗರಾಜು, ಭಾಗವಹಿಸಲಿದ್ದು, ಜಲ್ಲೆಯ ಹೆಚ್ಚಿನ ಆಸಕ್ತ, ನೊಂದ ಜನರು ಭಾಗವಹಿಸುವಂತೆ ಮನವಿ ಮಾಡಿದರು.

ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಯು ವಿದ್ಯಾರ್ಥಿಗಳಿಗೆ ದೊರೆತ ಜಯ ಸ್ವಾಗತಿಸುತ್ತೇವೆ. ಪ್ರಧಾನ ಮಂತ್ರಿಗಳು ನೀಟ್ ರದ್ದು ಪಡಿಸಿ ಈ ಹಿಂದಿನ ಮಾದರಿಯಲ್ಲಿ ಪರೀಕ್ಷೆ ನಡೆಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಬೇಕು. ಕೋವಿಡ್ ಸಂದರ್ಭದಲ್ಲಿ ಹೆಚ್ಚಳವಾದ ಬೆಲೆಗಳನ್ನು ಇಳಿಸಬೇಕು. ಮುಂಗಾರು ವೈಫಲ್ಯದಿಂದ ಕೂಡಲೇ ಬರ ಪರಿಹಾರ ಘೋಷಿಸುವಂತೆ ಒತ್ತಾಯಿಸಿದರು.

ಮೈಕ್ರೋ ಫೈನಾನ್ಸ್‌ಗಳ ಸಾಲ ವಸೂಲಾತಿ ನಿಲ್ಲಿಸಬೇಕು. ಎಸ್‌ಐಆರ್ ಎಲ್ಲ ವಿಭಾಗದ ಮತದಾರರಿಗೂ ಅನ್ವಯವಾಗಬೇಕು. ಇಲ್ಲಿ ಅರ್ಹರು ಮತದಾನದ ಹಕ್ಕು ಕಳೆದುಕೊಳ್ಳುವಂತೆ ಆಗಬಾರದು. ಮೇವುಕೇಂದ್ರ ತೆರೆದು ಕುಡಿವ ನೀರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು. ಈ ಸಂಬಂಧ ಈಗಾಗಲೇ ನಾಲೆಗೆ ನೀರು ಹರಿಸಿದ್ದು, ನಾಲೆಯ ಕೊನೆಯ ಭಾಗಕ್ಕೆ ತಲುಪುವಂತೆ ಕ್ರಮವಹಿಸಲು ಆಗ್ರಹಿಸಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಬಿ.ಎಂ.ಶಿವಮಲ್ಲಯ್ಯ, ಉಪಾಧ್ಯಕ್ಷೆ ಮಂಜುಳಾ, ಮದ್ದೂರು ಅಧ್ಯಕ್ಷ ಟಿ.ಪಿ.ಅರುಣ್‌ಕುಮಾರ್, ಮಂಡ್ಯ ಉಪಾಧ್ಯಕ್ಷ ಅಬ್ದುಲ್ಲಾ ಇದ್ದರು.

# ಆ.2ರಂದು ಮಂಡ್ಯದಲ್ಲಿ ಜಿಲ್ಲಾ ಎಂಟಿಬಿ ಸೈಕ್ಲಿಂಗ್ ಆಯ್ಕೆ ಸ್ಪರ್ಧೆ



**ಮಂಡ್ಯ:** ಕರ್ನಾಟಕ ರಾಜ್ಯ ಎಂಟಿಬಿ ಸೈಕ್ಲಿಂಗ್ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲು ಮಂಡ್ಯ ಜಿಲ್ಲಾ ಅಮೆಚ್ಯೂರ್ ಸೈಕ್ಲಿಂಗ್ ಅಸೋಸಿಯೇಷನ್‌ನಿಂದ ಜಿಲ್ಲಾ ಎಂಟಿಬಿ ಸೈಕ್ಲಿಂಗ್ ಆಯ್ಕೆ ಪಂದ್ಯಾವಳಿಯನ್ನು ಆ.2ರಂದು ನಡೆಸಲಾಗುವುದು ಎಂದು ಅಸೋಸಿಯೇಷನ್‌ನ ಅಧ್ಯಕ್ಷ ಟಿ.ವಿ.ನಾಗರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಯು ರೋಡ್, ಆಫ್‌ರೋಡ್(ಅಡ್ಡಗುಡ್ಡ) ಮತ್ತು ವೆಲೋಡ್ರೋಮ್ ವಿಭಾಗಗಳಲ್ಲಿ ನಡೆಯಲಿದ್ದು, ಜಿಲ್ಲೆಯ ಸ್ವಾಭಾವಿಕ ನೈಜ ಪ್ರತಿಭೆಗಳನ್ನು ಪಂದ್ಯಾವಳಿಗೆ ಪರಿಚಯಿಸುವ ಉದ್ದೇಶದಿಂದ ಆಯ್ಕೆ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ರಾಜ್ಯ ಮಟ್ಟದ ಪಂದ್ಯಾವಳಿಯು ಆ.7ರಿಂದ 9ರವರೆಗೆ ಗದಗ ಜಿಲ್ಲೆಯಲ್ಲಿ ನಡೆಯಲಿದೆ ಎಂದರು. ಆಯ್ಕೆ ಪ್ರಕ್ರಿಯೆಗೆ 12ರಿಂದ 23 ವರ್ಷದ ಗಂಡು ಮತ್ತು ಹೆಣ್ಣು ಮಕ್ಕಳು ಭಾಗವಹಿಸಬಹುದಾಗಿದ್ದು, ಆ.1ರ ಸಂಜೆ 6 ರೊಳಗೆ ನೊಂದಾಯಿಸಿಕೊಳ್ಳಬೇಕು. ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ 17 ಮಂದಿ ಗುರುತಿಸಲ್ಪಟ್ಟ ಸೈಕ್ಲರ್‌ಗಳಿದ್ದು, ಗ್ರಾಮಗಳಲ್ಲಿನ ಶಾಲಾ ಮಟ್ಟದ ಸೈಕ್ಲಿಂಗ್ ಸಾಮರ್ಥ್ಯ ಇರುವ ಮಕ್ಕಳ ಅನ್ವೇಷಣೆಗೆ ಪಂದ್ಯಾವಳಿ ನಡೆಸುತ್ತಿರುವುದಾಗಿ ಹೇಳಿದ ಅವರು, ಈ ಚಾಂಪಿಯನ್ ಶಿಪ್‌ಗೆ ಬೇಕಾಗುವ ಲಕ್ಷಾಂತರ ರೂ ಮೌಲ್ಯದ ಸೈಕಲ್‌ಗಳನ್ನು ಬಾಡಿಗೆಗೆ ಪಡೆದು ತರಬೇತಿ ನೀಡುವುದಾಗಿ ಮಾಹಿತಿ ಹಂಚಿಕೊಂಡರು.

ಆಕಸ್ತರು ನೋಂದಣಿ ಹಾಗೂ ಮಾಹಿತಿಗೆ 9916136335 ಅಥವಾ mandyacyclingmysooru.mdaca@ ರಟಚುಟ.ಛಿಂಟ ಗೆ ಸಂಪರ್ಕಿಸಲು ಮನವಿ ಮಾಡಿದರು.

ಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಧನ್ಯ ಸುಂದರ್ ಇದ್ದರು.

# ಮಂಡ್ಯದಲ್ಲಿ ಜು.29ರಂದು ಜಿಲ್ಲಾ ಮಟ್ಟದ ಮಹಿಳಾ ವೈಜ್ಞಾನಿಕ ಜಾಗೃತಿ ಸಮಾವೇಶ



**ಮಂಡ್ಯ:** ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಮಂಡ್ಯ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾ ಮಟ್ಟದ ಮಹಿಳಾ ವೈಜ್ಞಾನಿಕ ಜಾಗೃತಿ ಸಮಾವೇಶವನ್ನು ಜು.29ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪರಿಷತ್ತಿನ ಗೌರವ ಮಾರ್ಗದರ್ಶಕಿ ಸುನಂದಾ ಜಯರಾಂ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರು ಮತ್ತು ಮಕ್ಕಳು ಧಾರ್ಮಿಕ ಮೌಢ್ಯಗಳಿಗೆ ಒಳಗಾಗುತ್ತಿದ್ದಾರೆ. ಅವರಿಗೆ ಸಮರ್ಪಕ ಮಾಹಿತಿ ನೀಡಿ ಜಾಗೃತಿ ಮೂಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಅಂದು ಬೆಳಗ್ಗೆ 11 ಗಂಟೆಗೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ.ವಿಜಯಲಕ್ಷ್ಮಿ ?ಮ ದೇಶಮಾನೆ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಪಿ.ರವಿಕುಮಾರ್ ಗೌಡ ಅಧ್ಯಕ್ಷತೆ ವಹಿಸುವರು. ಮಹಿಳಾ ಆಯೋಗದ ಅಧ್ಯಕ್ಷ ಡಾ.ನಾಗಲಕ್ಷ್ಮಿ ?ಮ ಚೌದರಿ ಪುಷ್ಪಾರ್ಚನೆ ಮಾಡುವರು. ಮುಖ್ಯ ಅತಿಥಿಗಳಾಗಿ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಪರಿಷತ್ತಿನ ಉಪಾಧ್ಯಕ್ಷ ಎಂ.ವಿನಯ್‌ಕುಮಾರ್, ಗೌರವ ಮಾರ್ಗದರ್ಶಕರಾದ ಎಂ.ಸಿ.ಬಸವರಾಜು, ಬಿ.ಟಿ.ವಿಶ್ವನಾಥ್ ಭಾಗವಹಿಸುವರು ಎಂದು ಹೇಳಿದರು.


ಸಮಾವೇಶದಲ್ಲಿ ವೈಜ್ಞಾನಿಕ ಚಿಂತನೆಯಲ್ಲಿ ಮಹಿಳೆಯ ಪಾತ್ರ ಕುರಿತ ಮೊದಲ ಗೋಷ್ಠಿಯು ಮಧ್ಯಾಹ್ನ 12.30ರಿಂದ 1.30ರವರೆಗೆ ನಡೆಯಲಿದೆ. ಕಲ್ಬುರ್ಗಿಯ ಚಿಂತಕ ಹಾಗೂ ಸಾಹಿತಿ ಡಾ.ಜಯದೇವಿ ಗಾಯಕ್ವಾಡ್ ವಿಷಯ ಮಂಡನೆ ಮಾಡುವರು. ಪರಿಷತ್ತಿನ ರಾಜ್ಯ ನಿರ್ದೇಶಕಿ ಪುಷ್ಪಲತಾ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕೋಷಾಧ್ಯಕ್ಷ ಚೋಕನಹಳ್ಳಿ ಜಯರಾಮು, ಗೌರವಾಧ್ಯಕ್ಷ ಬಿ.ಅನ್ನದಾನಿ, ಸಂಚಾಲಕರಾದ ಬಿ.ಸಿ.ಮನು, ಜಿ.ಆರ್. ಆಧಿತ್ಯ ಉಪಸ್ಥಿತರಿರುವರು ಎಂದು ಮಾಹಿತಿ ನೀಡಿದರು.

ಪರಿಷತ್ತಿನ ಉಪಾಧ್ಯಕ್ಷ ಎಂ.ವಿನಯ್‌ಕುಮಾರ್ ಮಾತನಾಡಿ, ಮೌಢ್ಯಾಚರಣೆ ಮತ್ತು ಸಾಮಾಜಿಕ ದುಷ್ಪರಿಣಾಮಗಳ ಕುರಿತ 2ನೇ ಗೋಷ್ಠಿಯು ಮಧ್ಯಾಹ್ನ 1.30ರಿಂದ 2.30ರವರೆಗೆ ನಡೆಯಲಿದ್ದು, ಸಾಮಾಜಿಕ ಪರಿವರ್ತನಾ ಹೋರಾಟಗಾರ ಎಚ್.ಕೆ.ವಿವೇಕಾನಂದ ವಿಷಯ ಮಂಡನೆ ಮಾಡುವರು. ಪರಿಷತ್ತಿನ ಗೌರವಾಧ್ಯಕ್ಷೆ ವಸಂತಮ್ಮ ಅಧ್ಯಕ್ಷತೆ ವಹಿಸುವರು. ತಾಲೂಕು ಅಧ್ಯಕ್ಷ ಡಿ.ಸಿ.ಮಹೇಂದ್ರ, ಸಂಘಟನಾ ಕಾರ್ಯದರ್ಶಿ ಕೆ.ವಿ.ವೆಂಕಟಾಚಲಯ್ಯ, ನಿರ್ದೇಶಕ ಸಿ.ಎನ್.ಶಿವಕುಮಾರ್ ಉಪಸ್ಥಿತರಿರುವರು ಎಂದು ತಿಳಿಸಿದರು.

ಸಮಾರೋಪ ಸಮಾರಂಭವು ಮಧ್ಯಾಹ್ನ 3.30ಕ್ಕೆ ನಡೆಯಲಿದ್ದು, ಭಗವಾನ್ ಬುದ್ಧ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಯಮದೂರು ಸಿದ್ದರಾಜು ಸಮಾರೋಪ ಭಾಷಣ ಮಾಡುವರು, ಪರಿಷತ್ತಿನ ಜಿಲ್ಲಾಧ್ಯಕ್ಷ ಚಿಕ್ಕರಸಿನಕೆರೆ ಸಿ.ಶಿವಲಿಂಗಯ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಯಾಗಿ ಉಪಾಧ್ಯಕ್ಷ ಡಾ.ಕೆ.ಅನಂತ್‌ನಾಗ್ ಭಾಗವಹಿಸಲಿದ್ದು, ತಾಲೂಕು ಅಧ್ಯಕ್ಷರಾದ ಅಪ್ಪಾಜಿ, ಶಿವಕುಮಾರ್, ನಿರ್ದೇಶಕರಾದ ಭೂಮಿಕಾ, ಚನ್ನಕೇಶವ ಉಪಸ್ಥಿತರಿರುವರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಚಿಕ್ಕರಸಿನಕೆರೆ ಸಿ.ಶಿವಲಿಂಗಯ್ಯ, ಗೌರವಾಧ್ಯಕ್ಷೆ ವಸಂತಮ್ಮ, ಉಪಾಧ್ಯಕ್ಷ ದೇವರಾಜ್‌ಕೊಪ್ಪ, ತಾಲೂಕು ಅಧ್ಯಕ್ಷ ಮಹೇಂದ್ರ, ಸಂಘಟನಾ ಕಾರ್ಯದರ್ಶಿ ಮಂಗಲ ಲಂಕೇಶ್, ರಾಘವೇಂದ್ರ ಇದ್ದರು.

# ಉಭಯ ರಾಜ್ಯಗಳಲ್ಲಿ ಮತದಾನದ ಹಕ್ಕು ಹೊಂದಿರುವವರ ವಿರುದ್ಧ ತನಿಖೆಗೆ ಆಗ್ರಹ



**ಮಂಡ್ಯ:** ಜಿಲ್ಲೆಯಲ್ಲಿರುವ ತಮಿಳು ನಿವಾಸಿಗಳು ತಮಿಳುನಾಡು ಹಾಗೂ ಮಂಡ್ಯ ಎರಡೂ ಕಡೆ ಮತದಾನದ ಹಕ್ಕನ್ನು ಹೊಂದಿದ್ದು ಈ ಸಂಬಂಧ ಸಮಗ್ರ ತನಿಖೆ ನಡೆಸಿ ಕಾನೂನು ಕ್ರಮ ಜರುಗಿಸುವಂತೆ ಸಾಮಾಜಿಕ ಕಾರ್ಯಕರ್ತ ಕೆ.ಆರ್.ರವೀಂದ್ರ ಚುನಾವಣಾ ಆಯೋಗವನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಮಿಮ್ಸ್ ಸರಕಾರಿ ಜಾಗ ತಮಿಳು ಕಾಲೋನಿಯಲ್ಲಿ ಸುಮಾರು 576 ಕಟುಂಬಗಳ ಪೈಕಿ 1685 ಮತದಾರರಿದ್ದಾರೆ. ಅವರಲ್ಲಿ ಸಾಕಷ್ಟು ಮಂದಿ ತಮಿಳುನಾಡು ಹಾಗೂ ಮಂಡ್ಯ ಎರಡೂ ಕಡೆ ಗುರುತಿನ ಚೀಟಿ ಹಾಗೂ ಪಡಿತರ ಚೀಟಿಗಳನ್ನು ಪಡೆದು ಸರಕಾರಿ ಸೌಲಭ್ಯಗಳನ್ನು ಸರಕಾರಗಳನ್ನು ವಂಚಿಸುತ್ತಿದ್ದಾರೆ ಎಂದು ಆರೋಪಿಸಿದರು.

ತಮಿಳು ನಿವಾಸಿಗಳು ಶ್ರೀರಂಗಪಟ್ಟಣ ಪಟ್ಟಣ ವ್ಯಾಪ್ತಿಯ ಸುತ್ತಮುತ್ತ 150ರಿಂದ 200 ಕುಟುಂಬಳು ಇವೆ. ಇವರು ಸ್ವಂತ ಮನೆ ಹಾಗೂ ಜಮೀನು ಹೊಂದಿರುವುದಲ್ಲದೇ. ತಮಿಳುನಾಡಿನಲ್ಲಿಯೂ ಆಸ್ತಿ ಹೊಂದಿರುವವರೂ ಇದ್ದು, ಎರಡೂ ಕಡೆ ಮತದಾನದ ಹಕ್ಕನ್ನು ಹೊಂದಿದಾರೆ ಎಂದು ದೂರಿದರು.

ಮಿಮ್ಸ್ ಸ್ಥಳದಲ್ಲಿ ಟ್ರಾಮಾ ಕೇರ್ ಹಾಗೂ ಸೂಪರ್ ಸ್ಪೆಷಿಯಾಲಿಟಿ ಆಸ್ಪತ್ರೆ ಆರಂಭಕ್ಕೆ ಕೇಂದ್ರದಿಂದ ಅನುದಾನ ಪ್ರಥಮ ಭಾಗ ಬಿಡುಗಡೆಯಾಗಲಿದೆ. ಒತ್ತುವರಿಯಾದ ಸ್ಥಳ ತೆರವು ಗೊಳಿಸಲು ಹೈಕೋರ್ಟ್ ಒಂದು ವರ್ಷದ ಗಡುವು ನೀಡಿದ್ದು, ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ ?ಯ ವಹಿಸುತ್ತಿದೆ. ಇದರಲ್ಲಿ 5.25 ಗುಂಟೆ ಸ್ಥಳ ತಮಿಳು ಕಾಲೋನಿಯ ತೆರವಿಗೆ ತಡೆಯಾಜ್ಞೆಯಿದ್ದು, ಇದರ ತೆರವಿಗೆ ನಗರಸಭೆಯ ವಕೀಲರೇ ಅಡ್ಡಿಯಾಗಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

# ಕಾರ್ಗಿಲ್ ವಿಜಯೋತ್ಸವ ಆಚರಣೆ


**ಮಂಡ್ಯ:** ನಗರದ ಸ್ವರ್ಣಸಂದ್ರ ಸುಧೀರ್ ಪಾರ್ಕ್‌ನಲ್ಲಿ ಜಿಲ್ಲಾ ಮಾಜಿ ಸೈನಿಕರ ಸಂಘ, ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ, ಜಯ ಕರ್ನಾಟಕ ಸಂಘಟನೆ ಹಾಗೂ ಜೈ ಕರ್ನಾಟಕ ಪರಿಷತ್, ರೋಟರಿ ಸಹಯೋಗಲ್ಲಿ 27ನೇ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮ ನಡೆಯಿತು.

ಪ್ಯಾರಾ ಮಿಲಿಟರಿ ಸಂಘದ ಗೌರವಾಧ್ಯಕ್ಷ ಎನ್.ರಮೇಶ್ ಮಾತನಾಡಿ, ಇವತ್ತಿನ ಸ್ಥಿತಿಯಲ್ಲಿ ನಮ್ಮ ಭಾರತ ಸಮೃದ್ಧಿಯಾಗಿ ನಿಂತಿದೆ. ಯಾವ ಆಯಾಮದಲ್ಲಿ ನೋಡಿದರೂ ನಮ್ಮ ಸೈನ್ಯದ ಶಕ್ತಿ ಹೆಚ್ಚಿದೆ. ಇದೆಲ್ಲವೂ ಹಿಂದಿನ ದಿನಗಳಲ್ಲಿ ಇರಲಿಲ್ಲ. ಒಟ್ಟಿನಲ್ಲಿ ಶಕ್ತಿಯುತವಾಗಿ ಬೆಳೆಯುತ್ತಿರುವ ರಾಷ್ಟ್ರ ನಮ್ಮ ಭಾರತವಾಗಿದೆ ಎಂದು ಶ್ಲಾಘಿಸಿದರು.

ಜಯ ಕರ್ನಾಟಕ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಯೋಗಣ್ಣ ಮಾತನಾಡಿ, ಇದು 27ನೇ ಕಾರ್ಗಿಲ್ ವಿಜಯೋತ್ಸವಾದ ಕಾರ್ಯಕ್ರಮ ಇದಾಗಿದೆ. ಇಷ್ಟೊಂದು ಮಾಜಿ ಹಾಗೂ ಹಾಲಿ ಸೈನಿಕರ ಸಮ್ಮುಖದಲ್ಲಿ ಈ ಕಾರ್ಯಕ್ರಮ ಮಾಡಲಾಗುತ್ತಿರುವುದು ಸಂತಸ ತಂದಿದೆ. ನಮ್ಮ ದೇಶದ ಗಡಿಯಲ್ಲಿ ನಮ್ಮ ಸೈನಿಕರಿಗೆ ಶಕ್ತಿ ತುಂಬುವ ಕೆಲಸ ಮಾಡಿರುವುದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಎಂದು ಶ್ಲಾಘಿಸಿದರು.



## ಮೀನುಮರಿ ಪಾಲನೆದಾರರಿಂದ ಅರ್ಜಿ ಆಹ್ವಾನ



**ರಾಮನಗರ:** 2026–27ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯಿಂದ ಜಿಲ್ಲಾ ವಲಯ ಯೋಜನೆಯಡಿ ಬೆಂಗಳೂರು ದಕ್ಷಿಣ ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿ ಕೆರೆಗಳಿಗೆ ಬಲಿತ/ಬಿತ್ತನೆ ಮೀನುಮರಿಗಳನ್ನು ಸರ್ಕಾರ ನಿಗಧಿಪಡಿಸಿರುವ ದರಗಳಲ್ಲಿ (ಸಾಗಾಣಿಕೆ ವೆಚ್ಚ ಸೇರಿ)ಅನುದಾನ ಲಭ್ಯತೆಗನುಗುಣವಾಗಿ ಸರಬರಾಜು ಮಾಡಲು ಮೀನುಗಾರಿಕೆ ಇಲಾಖೆಯಲ್ಲಿ ನೋಂದಾಯಿಸಿರುವ ಆಸಕ್ತ ಮೀನುಮರಿ ಪಾಲನೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸ್ಪಾನ್ ಮೀನುಮರಿಗಳನ್ನು ಸರ್ಕಾರಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಕಡ್ಡಾಯವಾಗಿ ಖರೀದಿಸಿ ಪಾಲನೆ ಮಾಡಿರಬೇಕು. ಅರ್ಜಿ ನಮೂನೆಯನ್ನು ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರಿಂದ ಪಡೆದು ಅಗತ್ಯ ದಾಖಲಾತಿಗಳೊಂದಿಗೆ 2026ರ ಆಗಸ್ಟ್ 17ರ ಸಂಜೆ 5.30 ರೊಳಗೆ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಚ್.ಡಿ. ಕುಮಾರಸ್ವಾಮಿ ಶ್ರಮದ ಫಲ : ಮಂಡ್ಯಕ್ಕೆ ಆಧಾರ್ ಸೇವಾ ಕೇಂದ್ರ

## ಮಂಡ್ಯಕ್ಕೂ ಸಿಗಲಿದೆ ಪ್ರಧಾನಿ ನರೇಂದ್ರ ಮೋದಿ ಅವರ ಡಿಜಿಟಲ್ ಆಡಳಿತದ ಬಲ

**ನವದೆಹಲಿ / ಮಂಡ್ಯ:** ಮಂಡ್ಯ ಜನತೆಯ ಸುದೀರ್ಘ ಕಾಲದ ಬೇಡಿಕೆಯಾಗಿದ್ದ ಆಧಾರ್ ಸೇವಾ ಕೇಂದ್ರ ಸ್ಥಾಪನೆಯ ಕನಸು ನನಸಾಗುತ್ತಿದ್ದು, ಶೀಘ್ರವೇ ಈ ಕೇಂದ್ರವನ್ನು ಮಂಡ್ಯದಲ್ಲಿ ಆರಂಭ ಮಾಡುವುದಾಗಿ ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಮಂಡ್ಯ ಲೋಕಸಭಾ ಕ್ಷೇತ್ರದ ಸದಸ್ಯ , ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಪತ್ರ ಬರೆದು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ನಾಗರೀಕ ಸೇವೆಗಳನ್ನು ಸುಲಭವಾಗಿ ಮತ್ತು ತ್ವರಿತಗತಿಯಲ್ಲಿ ಒದಗಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಸಂಕಲ್ಪದಂತೆ ಮಂಡ್ಯದಲ್ಲಿ ಆಧಾರ್ ಸೇವಾ ಕೇಂದ್ರ ಸ್ಥಾಪನೆಗೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ.

ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರು, ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಆಧಾರ್ ಸೇವಾ ಕೇಂದ್ರದ ಸ್ಥಾಪನೆ ಬಗ್ಗೆ ಕೇಂದ್ರ ರೈಲ್ವೆ, ಮಾಹಿತಿ ಮತ್ತು ಪ್ರಸಾರ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ಸಚಿವರಾದ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದರು. ಜತೆಗೆ ಈ ಬಗ್ಗೆ ಮನವಿ ಪತ್ರವನ್ನು ಕೂಡ ಸಲ್ಲಿಸಿ ಜಿಲ್ಲೆಯಲ್ಲಿ ಆಧಾರ್ ವಿವರಗಳ ದಾಖಲಾತಿ ಮತ್ತು ನವೀಕರಣ ಸೇವೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಚರ್ಚಿಸಿದ್ದರು.

ಮಂಡ್ಯದಲ್ಲಿ ಆಧಾರ್ ದಾಖಲಾತಿ ಮತ್ತು ನವೀಕರಣ ಪ್ರಕ್ರಿಯೆಗಳು ಅತ್ಯಂತ ನಿಧಾನಗತಿಯಲ್ಲಿ ಸಾಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ವಿಪರೀತ ಸಮಸ್ಯೆಯಾಗಿದೆ.





ವಿಶೇಷವಾಗಿ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ರೈತರು ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳು ಅನಾನುಕೂಲ ಅನುಭವಿಸುತ್ತಿದ್ದಾರೆ. ಹಾಗೆಯೇ ವಿದ್ಯಾರ್ಥಿ ವೇತನ ಪಡೆಯುವುದು, ಪರೀಕ್ಷೆಗಳು, ನೇರ ನಗದು ವರ್ಗಾವಣೆ (ಡಿಬಿಟಿ) ಯೋಜನೆಗಳು ಮತ್ತು ಇತರ ಹಲವಾರು ಸರ್ಕಾರಿ ಸೇವೆಗಳಿಗೆ ಆಧಾರ್ ಸೇವೆಗಳು ಅನಿವಾರ್ಯವಾಗಿದ್ದು, ಜಿಲ್ಲೆಯಲ್ಲಿ ಶಾಶ್ವತ ಆಧಾರ್ ಸೌಲಭ್ಯ ಕಲ್ಪಿಸುವುದು ಅತ್ಯಗತ್ಯವಾಗಿದೆ ಎಂಬ ಅಂಶವನ್ನು ಅಶ್ವಿನಿ ವೈಷ್ಣವ್ ಅವರಿಗೆ ಸಚಿವ ಕುಮಾರಸ್ವಾಮಿ ಅವರು ಮನವರಿಕೆ ಮಾಡಿಕೊಟ್ಟಿದ್ದರು.

ಸಚಿವರ ಮನವಿಯನ್ನು ಪುರಸ್ಕರಿಸಿರುವ ಅಶ್ವಿನಿ ವೈಷ್ಣವ್ ಅವರು ಕುಮಾರಸ್ವಾಮಿ ಅವರಿಗೆ ಪತ್ರ ಬರೆದಿದ್ದು, ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ಪರಿಶೀಲಿಸಿದೆ ಎಂದು ತಿಳಿಸಿದ್ದಾರೆ. ಆಧಾರ್ ದಾಖಲಾತಿ ಮತ್ತು ನವೀಕರಣ ಸೇವೆಗಳು ಪ್ರಸ್ತುತ ಮಂಡ್ಯ ಜಿಲ್ಲೆಯಾದ್ಯಂತ 110 ಕಾರ್ಯಾಚರಣಾ ದಾಖಲಾತಿ ಕಿಟ್‌ಗಳ ಮೂಲಕ ಲಭ್ಯವಿದ್ದರೂ ಯುಐಡಿಎಐ ಈಗ ಮಂಡ್ಯದಲ್ಲಿ ನಾಲ್ಕು ದಾಖಲಾತಿ ಕಿಟ್‌ಗಳೊಂದಿಗೆ ಆಧಾರ್ ಸೇವಾ ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಿದೆ. ಇದು ಜಿಲ್ಲೆಯ ಆಧಾರ್ ಸೇವಾ ಮೂಲಸೌಕರ್ಯವನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ ಎಂದು ಅವರು ಹೇಳಿದ್ದಾರೆ.

ಹೊಸ ಸೌಲಭ್ಯವು ಮಂಡ್ಯ ನಗರ ಮತ್ತು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸಾವಿರಾರು ನಿವಾಸಿಗಳಿಗೆ ಆಧಾರ್ ಸೇವೆಗಳನ್ನು ತ್ವರಿತವಾಗಿ ಪಡೆಯುವುದು ಸಾಧ್ಯವಾಗುತ್ತದೆ.

**ಅಶ್ವಿನಿ ವೈಷ್ಣವ್ ಅವರಿಗೆ ಸಚಿವರ ಧನ್ಯವಾದ:** ಸಕ್ಕರೆನಾಡಿನ ಜನತೆಯ ದೀರ್ಘ ಕಾಲದ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಮಂಡ್ಯದಲ್ಲಿ 'ಆಧಾರ್ ಸೇವಾ ಕೇಂದ್ರ' ಸ್ಥಾಪಿಸಲು ಭಾರತ ಸರಕಾರವು ಅನುಮೋದನೆ ನೀಡಿದೆ ಎಂಬ ವಿಷಯವನ್ನು ಹಂಚಿಕೊಳ್ಳಲು ನನಗೆ ಬಹಳ ಸಂತೋಷವಾಗುತ್ತಿದೆ ಎಂದು ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ನನ್ನ ಮನವಿಗೆ ಸ್ಪಂದಿಸಿದ ಕೇಂದ್ರದ ಸಚಿವರಾದ ಅಶ್ವಿನಿ ವೈಷ್ಣವ್ ಅವರು; ಮಂಡ್ಯದಲ್ಲಿ ಆಧಾರ್ ಸೇವಾ ಕೇಂದ್ರ ಸ್ಥಾಪಿಸುವ ಬಗ್ಗೆ ನನಗೆ ಪತ್ರ ಮುಖೇನ ತಿಳಿಸಿದ್ದಾರೆ. ಈ ಕೇಂದ್ರದ ಸ್ಥಾಪನೆಯಿಂದ ಮಂಡ್ಯ ಮತ್ತು ಸುತ್ತಮುತ್ತಲ ಪ್ರದೇಶದ ಜನರಿಗೆ ಆಧಾರ್ ನೋಂದಣಿ ಹಾಗೂ ಮಾಹಿತಿ ನವೀಕರಣ ಸೇವೆ ಪಡೆಯುವುದು ಅತ್ಯಂತ ಸುಲಭವಾಗಲಿದೆ. ರಾಷ್ಟ್ರದ ಜನತೆಗೆ ನಾಗರೀಕ ಸೇವೆಗಳನ್ನು ಸುಲಭ ಮತ್ತು ಸರಳವಾಗಿ ಒದಗಿಸುವ ನಿಟ್ಟಿನಲ್ಲಿ ದೃಢ ಸಂಕಲ್ಪ, ಸ್ಪಷ್ಟ ದೂರದೃಷ್ಟಿ ಹೊಂದಿರುವ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹಾಗೆಯೇ, ಈ ಪ್ರಮುಖ ಉಪಕ್ರಮವನ್ನು ಸಾಕಾರಗೊಳಿಸುವಲ್ಲಿ ತ್ವರಿತ ಬೆಂಬಲ ಮತ್ತು ಸಕಾರಾತ್ಮಕ ಸ್ಪಂದನೆ ನೀಡಿದ ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಅವರಿಗೂ ನಾನು ಮನಃಪೂರ್ವಕವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

'ಡಿಜಿಟಲ್ ಇಂಡಿಯಾ'ವನ್ನು ಬಲಪಡಿಸುವ ಹಾಗೂ ತಳಮಟ್ಟದಲ್ಲಿ ಸಮರ್ಥ, ಸುಲಭವಾಗಿ ಲಭ್ಯವಿರುವ ಮತ್ತು ತಂತ್ರಜ್ಞಾನ ಆಧರಿತ ಸಾರ್ವಜನಿಕ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಇದು ಮತ್ತೊಂದು ಮಹತ್ವದ ಹೆಜ್ಜೆ. ಮಂಡ್ಯ ಜಿಲ್ಲೆಗೆ ಆಧಾರ್ ಸೇವಾ ಕೇಂದ್ರ ವರದಾನವಾಗಲಿದೆ ಎಂದು ಅವರು ಹೇಳಿದ್ದಾರೆ.

# ಹಡಪದ ಅಪ್ಪಣ್ಣ

ಉಪೇಕ್ಷಿತ ವಚನಕಾರರು



| ವೀಣಾ ಹೇಮಂತ್‌ಗೌಡ ಪಾಟೀಲ್

ಶರಣವರ್ಗದಲ್ಲಿ ನಿಜ ಸುಖಿ ಅಪ್ಪಣ್ಣ ಎಂದೇ ಕರೆಯಲ್ಪಟ್ಟ ಹಡಪದ ಅಪ್ಪಣ್ಣನವರ ಜೀವನವನ್ನು ನೋಡಿ ಸರ್ವಜ್ಞನು

ಬೆಚ್ಚನ ಮನೆ ಇರಲು
ವೆಚ್ಚಕ್ಕೆ ಹೊನ್ನಿರಲು
ಇಚ್ಚೆಯನರಿತು ನಡೆವ ಸತಿ ಇರಲು
ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ

ಎಂದು ಬರೆದಿರಬಹುದು ಎಂದು ಹೇಳಬಹುದು.

ಹಡಪದ ಅಪ್ಪಣ್ಣನವರು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಮಸಬಿನಾಳ ಗ್ರಾಮದ ಚೆನ್ನವೀರಪ್ಪ- ದೇವಕಮ್ಮನವರ ಉದರದಲ್ಲಿ ಜನಿಸಿದರು. ದೇಗಿನಾಳ ಗ್ರಾಮದ ಜೀರ ನಾಗಪ್ಪ- ಚೆನ್ನಬಸಮ್ಮನವರ ಮಗಳಾದ ಲಿಂಗಮ್ಮ ಇವರ ಪತ್ನಿ. ಇವರ ಕಾಲವನ್ನು ಕ್ರಿ.ಶ 1160 ಎಂದು ಗುರುತಿಸಲಾಗಿದ್ದು ಇವರು ?ಬಸವಪ್ರಿಯ ಕೂಡಲ ಚೆನ್ನಬಸವಣ್ಣ? ಎಂಬ ಅಂಕಿತನಾಮದಲ್ಲಿ ಸುಮಾರು 250 ವಚನಗಳನ್ನು ರಚಿಸಿದ್ದಾರೆ. ಅವರ ಪತ್ನಿ ನಿಜಶರಣೆ ಲಿಂಗಮ್ಮ ?ಅಪ್ಪಣ್ಣಪ್ರಿಯ ಚೆನ್ನಬಸವಣ್ಣ? ಅಂಕಿತದಲ್ಲಿ 114 ವಚನಗಳನ್ನು ರಚಿಸಿದ್ದಾರೆ.

ಮಸಬಿನಾಳ, ವಿಜಯಪುರಗಳಲ್ಲಿ ಶಿಕ್ಷಣ ಪಡೆದ ಅಪ್ಪಣ್ಣನವರು ಗುರುಗಳೊಂದಿಗೆ ಕೂಡಲಸಂಗಮದಲ್ಲಿ ನೆಲೆಸಿರುವ ಸಂದರ್ಭದಲ್ಲಿಯೇ ಬಸವಣ್ಣನವರು ಕೂಡಲಸಂಗಮದಲ್ಲಿ ನೆಲೆಸಿದ್ದರಿಂದ, ಇವರಿಬ್ಬರ ನಡುವೆ ಬಾಂಧವ್ಯ ಬೆಳೆಯುತ್ತದೆ. ನಂತರ ಕಲ್ಯಾಣಕ್ಕೆ ತೆರಳಿದ ಅಪ್ಪಣ್ಣ, ಶರಣರ ಖ್ಯಾತಿ ತಿಳಿದು ಕಲ್ಯಾಣಕ್ಕೆ ಬಂದನು.

ಬಸವಣ್ಣನವರು ಬಾಲ್ಯದ ಜೊತೆಗಾರ ಅಪ್ಪಣ್ಣನವರನ್ನು ಅನುಭವ ಮಂಟಪದಲ್ಲಿ ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಳ್ಳುತ್ತಾರೆ. ಅಣ್ಣನ ಬಗ್ಗೆ ಅಪಾರವಾದ ಗೌರವ, ಭಕ್ತಿ ಹೊಂದಿದ್ದ ಅಪ್ಪಣ್ಣನವರು ಕಾಯಾ- ವಾಚಾ- ಮನಸ್ಸಿನಿಂದ ಸೇವೆ ಮಾಡಿ ಅಣ್ಣನ ಕೊನೆಗಾಲದವರೆಗೂ ಅವರ ಒಡನಾಡಿಯಾಗಿ, ಆಪ್ತಸೇವಕನಾಗಿ ಬಾಳುತ್ತಾರೆ. ಲೌಕಿಕ- ಪಾರಮಾರ್ಥಿಕಗಳೆರಡನ್ನೂ ಲೀಲಾಜಾಲವಾಗಿ




ತೂಗಿಸಿಕೊಂಡು ಹೋಗುತ್ತಿದ್ದುದರಿಂದ ಶರಣರೆಲ್ಲ ಅವರನ್ನು ?ನಿಜಸುಖಿ ಅಪ್ಪಣ್ಣ? ಎಂದೂ, ಇವರ ಶರಣಸತಿ ಲಿಂಗಮ್ಮನನ್ನು ?ನಿಜಮುಕ್ತೆ? ಎಂದೂ ಕರೆದರು. ಅನುಭವ ಮಂಟಪದ ಮಹಾನುಭಾವಿಯಾದ ಅಪ್ಪಣ್ಣನವರ ವಚನಗಳಲ್ಲಿ ಷಟಸ್ಥಲದ ವಿಷಯಗಳು ಪ್ರಮುಖವಾಗಿ ಪ್ರಸ್ತಾಪವಾಗಿವೆ. ಪ್ರಭುದೇವ, ಅಕ್ಕಮಹಾದೇವಿ ಯರಂತೆ ಅಪ್ಪಣ್ಣನವರೂ ವಚನಗಳನ್ನು ರಚಿಸಿದ್ದು, ಕಾಯಕನಿಷ್ಠೆ, ದಾಸೋಹನಿಷ್ಠೆ, ಭಕ್ತಿ, ವೈರಾಗ್ಯ, ಆಚಾರ- ವಿಚಾರಗಳನ್ನು ವೈಚಾರಿಕತೆಯ ನೆಲೆಯಲ್ಲಿ ವಿಡಂಬನಾತ್ಮಕವಾಗಿ ವಚನಗಳಲ್ಲಿ ತಿಳಿಸುತ್ತಾರೆ. ಇವು ಅಜ್ಞಾನಿಗಳಿಗೆ ಸನ್ಮಾರ್ಗ ವನ್ನು ತೋರಿಸುವ ದಾರಿದೀಪಗಳಾದರೆ, ಶೋಷಕವರ್ಗಕ್ಕೆ ಚಾಟಿ ಏಟಿನಂತಿವೆ.

ಅನ್ನವನ್ನಿಕ್ಕಿದರೇನು? ಹೊನ್ನ ಕೊಟ್ಟರೇನು?
ಹೆಣ್ಣು ಕೊಟ್ಟರೇನು? ಮಣ್ಣು ಕೊಟ್ಟರೇನು?
ಪುಣ್ಯ ಉಂಟೆಂಬರು.
**ಅವರಿಂದಾದೊಡವೆ ಏನು ಅವರೀವುದಕ್ಕೆ?**
**ಇದಕ್ಕೆ ಪುಣ್ಯವಾವುದು, ಪಾಪವಾವುದು?**
**ನದಿಯ ಉದಕವ ನದಿಗೆ ಅರ್ಪಿಸಿ,**
**ತನತನಗೆ ಪುಣ್ಯ ಉಂಟೆಂಬ ಬಡ ಹಾರುವರಂತೆ,**
**ಸದಮಳ ಶಾಶ್ವತ ಮಹಾಘನಲಿಂಗವನರಿಯದೆ,**
**ಇವೇನ ಮಾಡಿದರೂ ಕಡೆಗೆ ನಿಷ್ಫಲವೆಂದಾತ,**
**ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.**


ಸಮಾಜದಲ್ಲಿ ಮೇಲ್ಜಾತಿಯವರೆನಿಸಿಕೊಂಡವರು ಕೆಳಜಾತಿಯವರಲ್ಲಿ, ನಿಮ್ಮ ಸ್ಥಿತಿಗೆ ಪಾಪಗಳೇ ಕಾರಣ. ತಮಗೆ ಗೋದಾನ, ಭೂದಾನ, ಅನ್ನದಾನ, ಕನ್ಯಾದಾನ ಗಳನ್ನು ಮಾಡುವ ಮೂಲಕ ನಿಮ್ಮ ಪಾಪಗಳನ್ನು ಕಳೆದುಕೊಳ್ಳಬಹುದೆಂಬ ಮೌಢ್ಯವನ್ನು ಬಿತ್ತಿದ್ದರು. ಅಜ್ಞಾನದಲ್ಲಿ ಮುಳುಗಿದ್ದ ಶ್ರಮಿಕವರ್ಗ ತಮ್ಮ ದುಡಿಮೆಯನ್ನೆಲ್ಲ ಇದಕ್ಕಾಗಿಯೇ ಸುರಿದು ಕಷ್ಟದ ಬದುಕನ್ನು ನಡೆಸುವುದನ್ನು ಕಂಡ ಅಪ್ಪಣ್ಣನವರು ಅನ್ನ, ನೀರು, ಹಣ ಇತ್ಯಾದಿಗಳನ್ನು ಕೊಟ್ಟು ಪುಣ್ಯ ಪಡೆಯಲು ಆ ವಸ್ತುಗಳನ್ನೇನು ನೀವು ಸೃಷ್ಟಿಸಿರುವಿರಾ? ಎಂದು ಪ್ರಶ್ನಿಸುವ ಮೂಲಕ ವೈಚಾರಿಕ ಸತ್ಯವಿಚಾರಗಳನ್ನು ತಿಳಿಸಿ, ಅವರನ್ನು ಶೋಷಣೆಯಿಂದ ಮುಕ್ತಗೊಳಿಸಲು ಪ್ರಯತ್ನಿಸಿದ್ದಾರೆ. ಜ್ಯೋತಿಷ್ಯ, ಶಾಸ್ತ್ರ, ಪುರಾಣಗಳನ್ನು ನಂಬಿ ಮೂಢನಂಬಿಕೆಯ ದಾಸರಾದ ಜನರನ್ನು ಅಪ್ಪಣ್ಣನವರು ಎಚ್ಚರಿಸಿದ್ದಾರೆ.

ಉದಯ, ಮಧ್ಯಾಹ್ನ, ಅಸ್ತಮ, ಕತ್ತಲೆ, ಬೆಳಗು
ದಿನ, ವಾರ, ಲಗ್ನ,ತಿಥಿ, ಮಾಸ ಸಂವತ್ಸರ ಹೋಗುತ್ತ ಬರುತ್ತಲಿವೆ.
ಇವ ನೋಡಿದವರೆಲ್ಲ ಇದರೊಳಗೆ ಹೋಗುತ್ತ
ಬರುತ್ತ ಇದ್ದಾರೆ.
ಜಗಕ್ಕೆ ಇವೀಗ ಇಷ್ಟವಾಗಿಪ್ಪವು.
ಎನ್ನ ದೇವಂಗೆ ಇವೊಂದೂ ಅಲ್ಲ.
ದಿನಕಾಲ ಯುಗಜುಗ ಪ್ರಳಯಕ್ಕೆ
ಹೊರಗಾದ ಆ ದೇವನ,
ಅಂಗವಿಸಿ ಮುಟ್ಟಿ ಹಿಡಿದ ಕಾರಣ,
ಎಮ್ಮ ಶರಣರು ಪ್ರಳಯಕ್ಕೆ ಹೊರಗಾದರು.
ಇದನರಿದು, ಅಂತಪ್ಪ ಶರಣರ ಪಾದವ ನಂಬಿ,
ಕೆಟ್ಟು ಬಟ್ಟಬಯಲಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ

ಮುಂಜಾನೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿಗಳೆಲ್ಲವೂ ಪ್ರಾಕೃತಿಕ ಕ್ರಿಯೆಗಳು. ದಿನ, ವಾರ, ವರ್ಷಗಳೂ ನಮ್ಮ ಗುರುತಿಗಾಗಿ ಮಾಡಿಟ್ಟುಕೊಂಡ ಚಿಂತನೆಯ ಸಾರ. ಆದರೆ, ಇವುಗಳನ್ನು ಅರಿಯದ ಮನುಷ್ಯ ಅವುಗಳ ಒಳಗೆ ತನ್ನ ಬದುಕಿನ ಒಳಿತು, ಕೆಡುಕುಗಳನ್ನು ತಳುಕು ಹಾಕಿಕೊಂಡು ಏಗುತ್ತಿದ್ದಾನೆ ಎನ್ನುವ ಅಪ್ಪಣ್ಣನವರು ಜೀವಕಂಟಕವಾದ ಮೂಢನಂಬಿಕೆಗಳಿಂದ ಹೊರಬರಲು ಸಮಾಜಕ್ಕೆ ಕರೆಕೊಡುತ್ತಾರೆ.

**ಅಂಗವ ಮಾರಿಕೊಂಡು ಉಂಬಾತನೊಬ್ಬ ಠಕ್ಕ.**
**ಲಿಂಗವ ಮಾರಿಕೊಂಡು ಉಂಬಾತನೊಬ್ಬ ಠಕ್ಕ**
**ಜಂಗಮವ ತೋರಿಕೊಂಡು ಉಂಬಾತನೊಬ್ಬ ಠಕ್ಕ.**
**ಇವರು ಮೂವರು ಕಂಗಳು ಕಾಲು ಹೋದವರ ಸಂಗದಂತೆ,**
**ಲಿಂಗ ಜಂಗಮಕ್ಕೆ ದೂರ,**
**ನಮ್ಮ ಶರಣರ ಸಂಗಸುಖಕ್ಕೆ ಸಲ್ಲರು ನೋಡಾ,**
**ಬಸವಪ್ರಿಯ ಕೂಡಲಚೆನ್ನಬಸವಣ್ಣಾ.**

ಹೊಟ್ಟೆಹೊರೆಯಲು ಭಕ್ತಿಯನ್ನು ಮಾರ್ಗವನ್ನಾಗಿ ಮಾಡಿಕೊಂಡು, ಆಸೆಗಾಗಿ ಮೋಸ ಮಾಡಿದರೆ ಅದರಿಂದ ಯಾವ ಲಾಭವೂ ಆಗಲಾರದು. ಅಂತಹ ಮೋಸಗಾರರಿಂದ ದೂರವಿದ್ದು, ಭಕ್ತಿಯನ್ನು ಸನ್ಮಾರ್ಗದ ಬದುಕಿನ ಕ್ರಮವೆಂದು ಭಾವಿಸಿದರೆ ಮುಕ್ತಿ ದೊರೆಯುತ್ತದೆ. ಇದು ಶರಣರ ಸಂಗದಿಂದ ಮಾತ್ರ ಸಾಧ್ಯವೆಂಬ ಧೋರಣೆ ಅಪ್ಪಣ್ಣನವರದು. ಕ್ರಾಂತಿಕಾರಕ ಧೋರಣೆ, ವೈಚಾರಿಕಪ್ರಜ್ಞೆಯ ಅಪ್ಪಣ್ಣನವರ ವಚನಗಳು ಸಮಾಜಕ್ಕೆ ಬೆಳಕಾಗಿ, ದಮನಿತರ ದನಿಯಾಗಿ, ದಾರಿತಪ್ಪಿದ ಸಮಾಜವನ್ನು ಬಂಡಾಯದ ಧ್ವನಿಯ ಮೂಲಕ ಸರಿದಾರಿಯಲ್ಲಿ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.




ಅಪ್ಪಣ್ಣನವರು ಬಸವಣ್ಣನವರ ಮಹಾಮಣಿಹದಲ್ಲಿ ತಮ್ಮ ಸೇವೆಯ ಅಹರ್ನಿಶಿ ಪಾಲನ್ನು ಸಲ್ಲಿಸಿದರೆ ಅವರ ಪತ್ನಿ ಲಿಂಗಮ್ಮ ದಾಸೋಹ ಭವನದ ಸಂಪೂರ್ಣ ಮೇಲುಸ್ತುವಾರಿ ವಹಿಸಿದ್ದರು.ಲಕ್ಷಾಂತರ ಜನರು ಪ್ರಸಾದ ಸ್ವೀಕರಿಸುವಾಗ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತು ಅವಿರತವಾಗಿ ಆಕೆ ದುಡಿಯುತ್ತಿದ್ದರು.

ಬಸವಣ್ಣನವರು ಲಿಂಗೈಕ್ಯರಾದ ನಂತರ ಕಲ್ಯಾಣವನ್ನು ತೊರೆದು ಹೊರಟ ಶರಣ ಸಂಕುಲದಲ್ಲಿ ಹಡಪದ ಅಪ್ಪಣ್ಣನವರು ಕೂಡ ಒಬ್ಬರು. ಮುಂದೆ ಅವರು ತಂಗಡಗಿಯಲ್ಲಿ ಲಿಂಗೈಕ್ಯರಾದರು. ಅಲ್ಲಿಯೇ ಅವರ ಸಮಾಧಿಯನ್ನು ಮಾಡಲಾಗಿದ್ದು ಇಂದಿಗೂ ಕೂಡ ಅವರ ಗದ್ದುಗೆಗೆ ಪೂಜಾ ವಿಧಿ ವಿಧಾನಗಳು ನಡೆಯುತ್ತವೆ.ಬನವಾಸಿಯ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿ ಕಲ್ಲಿನಲ್ಲಿರುವ ಶರಣರ ಶಿಲ್ಪಗಳಲ್ಲಿ ಅಪ್ಪಣ್ಣನವರ ವಿಗ್ರಹವನ್ನು ಇಂದಿಗೂ ಕೂಡ ಕಾಣಬಹುದು.

ನಿಜ ಸುಖಿ ಹಡಪದ ಅಪ್ಪಣ್ಣನವರ ಜಯಂತಿಯನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ. ಈ ದಿನ ಅವರನ್ನು ನೆನೆಯುವ ಮೂಲಕ ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವ ಸಂಕಲ್ಪ ಮಾಡುವ.

# ಮತ್ತೊಬ್ಬರ ನೆಮ್ಮದಿ ಕಸಿದವರು, ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ



| ಶಿವಬಸಪ್ಪ ಗು ಜಂಗಾಲಿ

ಮನುಷ್ಯನ ಜೀವನದಲ್ಲಿ ಹಣ, ಅಧಿಕಾರ, ಆಸ್ತಿ, ಹೆಸರು, ಪ್ರತಿಷ್ಠೆ ಎಲ್ಲವೂ ಮುಖ್ಯವೇ ಸರಿ. ಆದರೆ ಇವೆಲ್ಲಕ್ಕಿಂತ ಅಮೂಲ್ಯವಾದ ಒಂದು ಸಂಪತ್ತು ಇದೆ ಅದು ನೆಮ್ಮದಿ. ನೆಮ್ಮದಿಯಿಂದ ಮಲಗುವ ರಾತ್ರಿ, ಭಯವಿಲ್ಲದೆ ಬದುಕುವ ಮನಸ್ಸು, ಅಪರಾಧ ಭಾವನೆ ಇಲ್ಲದ ಅಂತರಂಗ, ಯಾರಿಗೂ ನೋವುಂಟು ಮಾಡಿಲ್ಲ ಎಂಬ ಆತ್ಮತೃಪ್ತಿ ಇವುಗಳಿಗೆ ಯಾವುದೇ ಬೆಲೆ ಕಟ್ಟಲಾಗುವುದಿಲ್ಲ.

ಕೆಲವರು ತಮ್ಮ ಸುಖಕ್ಕಾಗಿ ಮತ್ತೊಬ್ಬರ ಬದುಕನ್ನೇ ಅಸ್ತವ್ಯಸ್ತಗೊಳಿಸುತ್ತಾರೆ. ಸುಳ್ಳು ಹೇಳುತ್ತಾರೆ, ಮೋಸ ಮಾಡುತ್ತಾರೆ, ಅನ್ಯಾಯ ಮಾಡುತ್ತಾರೆ, ನಿರಪರಾಧಿಗಳ ಕಣ್ಣೀರಿಗೆ ಕಾರಣವಾಗುತ್ತಾರೆ. ಕ್ಷಣಿಕವಾಗಿ ಅವರು ಗೆದ್ದವರಂತೆ ಕಾಣಬಹುದು. ಅವರ ಕೈಯಲ್ಲಿ ಅಧಿಕಾರ ಇರಬಹುದು, ಹಣ ಇರಬಹುದು, ಜನರ ಪ್ರಶಂಸೆಯೂ ಇರಬಹುದು. ಆದರೆ ಅವರ ಮನಸ್ಸಿನ ಆಳದಲ್ಲಿ ಮಾತ್ರ ಒಂದು ಖಾಲಿತನ, ಒಂದು ಭಯ, ಒಂದು ಅಶಾಂತಿ ನಿಧಾನವಾಗಿ ಬೆಳೆಯುತ್ತಲೇ ಇರುತ್ತದೆ.

ಜೀವನದಲ್ಲಿ ಮಾಡಿದ ಪ್ರತಿಯೊಂದು ಒಳ್ಳೆಯ ಕೆಲಸಕ್ಕೂ ಫಲವಿದೆ. ಅದೇ ರೀತಿ ಮಾಡಿದ ಪ್ರತಿಯೊಂದು ಕೆಟ್ಟ ಕೃತ್ಯಕ್ಕೂ ಪ್ರತಿಫಲವಿದೆ. ಪ್ರಕೃತಿಯ ನಿಯಮವೇ ಅದು. ಇಂದು ನಾವು ಯಾರದೋ ನೆಮ್ಮದಿಯನ್ನು ಕಸಿದುಕೊಂಡರೆ, ನಾಳೆ ಅದೇ ನೋವು ಬೇರೆ ರೂಪದಲ್ಲಿ ನಮ್ಮ ಬದುಕಿನ ಬಾಗಿಲು ತಟ್ಟಬಹುದು. ಅದಕ್ಕಾಗಿಯೇ ಹಿರಿಯರು ಹೇಳುತ್ತಿದ್ದರು: "ಕಣ್ಣೀರಿನ ಶಾಪಕ್ಕೆ ಕಾಲವೇ ಉತ್ತರ ಕೊಡುತ್ತದೆ."

ಮತ್ತೊಬ್ಬರ ಮನಸ್ಸಿಗೆ ನೋವು ಕೊಟ್ಟು ಕಟ್ಟಿದ ಸಂತೋಷ ಎಂದಿಗೂ ಶಾಶ್ವತವಾಗುವುದಿಲ್ಲ. ಅನ್ಯಾಯದಿಂದ ಗಳಿಸಿದ ಹಣ ಮನೆ ಕಟ್ಟಬಹುದು, ಆದರೆ ಮನೆಯೊಳಗೆ ನೆಮ್ಮದಿಯನ್ನು ಕಟ್ಟಲು ಸಾಧ್ಯವಿಲ್ಲ. ಅಧಿಕಾರದಿಂದ ಜನರನ್ನು ಮೌನಗೊಳಿಸಬಹುದು, ಆದರೆ ಮನಸಾಕ್ಷಿಯನ್ನು ಮೌನಗೊಳಿಸಲು ಸಾಧ್ಯವಿಲ್ಲ. ಸುಳ್ಳಿನಿಂದ ಲೋಕವನ್ನು ಮೋಸಗೊಳಿಸಬಹುದು, ಆದರೆ ಸತ್ಯವನ್ನು ಎಂದಿಗೂ ಸೋಲಿಸಲು ಸಾಧ್ಯವಿಲ್ಲ.

ದೈವದ ನ್ಯಾಯಕ್ಕೆ ಗಡಿಯಾರವಿಲ್ಲ. ಅದು ನಮ್ಮ ಸಮಯಕ್ಕೆ ತಕ್ಕಂತೆ ನಡೆಯುವುದಿಲ್ಲ. ಆದರೆ ಅದು ನಡೆಯುವುದಿಲ್ಲ ಎಂದೂ ಅಲ್ಲ. ಕೆಲವೊಮ್ಮೆ ಉತ್ತರ ಬರಲು ದಿನಗಳು ಬೇಕಾಗಬಹುದು, ತಿಂಗಳುಗಳು ಬೇಕಾಗಬಹುದು, ವರ್ಷಗಳೂ ಬೇಕಾಗಬಹುದು. ಆದರೂ ನ್ಯಾಯ ತನ್ನ ದಾರಿಯನ್ನು ಮರೆಯುವುದಿಲ್ಲ. ಅದಕ್ಕಾಗಿಯೇ ಜನರು ಹೇಳುತ್ತಾರೆ ದೈವದ ಚಕ್ರ ನಿಧಾನವಾಗಿ ತಿರುಗಬಹುದು, ಆದರೆ ಅದು ಯಾರನ್ನೂ ಬಿಟ್ಟು ಹೋಗುವುದಿಲ್ಲ.

ಇನ್ನೊಬ್ಬರ ನಗುವನ್ನು ಕಸಿದು ತನ್ನ ನಗುವನ್ನು ಕಟ್ಟಿಕೊಳ್ಳುವವನು, ಒಂದು




ದಿನ ತನ್ನದೇ ನಗುವಿನ ಅರ್ಥವನ್ನು ಕಳೆದುಕೊಳ್ಳುತ್ತಾನೆ. ಇನ್ನೊಬ್ಬರ ಕನಸುಗಳನ್ನು ಒಡೆದು ತನ್ನ ಕನಸುಗಳನ್ನು ಕಟ್ಟಿಕೊಳ್ಳುವವನು, ತನ್ನ ಕನಸುಗಳೂ ಒಂದು ದಿನ ಕುಸಿಯುವುದನ್ನು ನೋಡಲೇಬೇಕಾಗುತ್ತದೆ. ಜೀವನವೇ ಹಾಗೆ ನಾವು ಬಿತ್ತಿದ ಬೀಜವೇ ಮರವಾಗಿ ನಮ್ಮ ಮುಂದೆ ನಿಲ್ಲುತ್ತದೆ.

ಒಬ್ಬ ಬಡವನ ದುಡಿಮೆಯ ಬೆವರನ್ನು ಕಸಿದುಕೊಂಡು ಶ್ರೀಮಂತನಾದವನಿಗೆ ಅರಮನೆ ಇರಬಹುದು; ಆದರೆ ಆ ಅರಮನೆಯಲ್ಲಿ ನೆಮ್ಮದಿಯ ನಿದ್ರೆ ಇರಲೇಬೇಕೆಂಬ ನಿಯಮವಿಲ್ಲ. ಮತ್ತೊಬ್ಬರ ಹಕ್ಕನ್ನು ಕಸಿದುಕೊಂಡು ಸಾಧಿಸಿದ ಜಯಕ್ಕೆ ಸಂಭ್ರಮ ಇರಬಹುದು; ಆದರೆ ಆ ಸಂಭ್ರಮದಲ್ಲಿ ಸಂತೃಪ್ತಿ ಇರುವುದಿಲ್ಲ. ಏಕೆಂದರೆ ಮನಸ್ಸು ಸತ್ಯವನ್ನು ಸದಾ ನೆನಪಿಸುತ್ತಲೇ ಇರುತ್ತದೆ.

ಜೀವನದ ದೊಡ್ಡ ಗೆಲುವು ಎಂದರೆ ಮತ್ತೊಬ್ಬರನ್ನು ಸೋಲಿಸುವುದಲ್ಲ; ಮತ್ತೊಬ್ಬರನ್ನು ಅಳಿಸದೆ, ಅವರ ಹಕ್ಕನ್ನು ಕಸಿಯದೆ, ಯಾರ ಕಣ್ಣೀರಿಗೂ ಕಾರಣವಾಗದೆ ಬದುಕುವುದು. ಅಂತಹ ಜೀವನವೇ ನಿಜವಾದ ವಿಜಯ. ಆ ಬದುಕಿಗೆ ಪ್ರಶಸ್ತಿ ಬೇಕಾಗುವುದಿಲ್ಲ. ಮನಸ್ಸಿನ ನೆಮ್ಮದಿಯೇ ಅದರ ಬಹುಮಾನ.

ಇಂದು ನಾವು ಮಾತನಾಡುವ ಪ್ರತಿಯೊಂದು ಮಾತು, ಮಾಡುವ ಪ್ರತಿಯೊಂದು ಕೆಲಸ, ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವೂ ಯಾರಿಗಾದರೂ ನೋವುಂಟು ಮಾಡುತ್ತಿದೆಯೇ ಎಂಬುದನ್ನು ಯೋಚಿಸಬೇಕು. ಒಂದು ಕಟುವಾದ ಮಾತು ಕೆಲವೊಮ್ಮೆ ವರ್ಷಗಳ ಗಾಯವನ್ನು ಉಂಟುಮಾಡಬಹುದು. ಒಂದು ಅನ್ಯಾಯದ ನಿರ್ಧಾರ ಒಂದು ಕುಟುಂಬದ ನೆಮ್ಮದಿಯನ್ನೇ ಕಸಿದುಕೊಳ್ಳಬಹುದು. ಆದ್ದರಿಂದ ಮಾನವೀಯತೆ ನಮ್ಮ ಪ್ರತಿಯೊಂದು ಹೆಜ್ಜೆಯಲ್ಲೂ ಜೊತೆಯಾಗಿರಬೇಕು.

ಕ್ಷಮೆ ಕೇಳುವುದು ದುರ್ಬಲತೆ ಅಲ್ಲ; ಅದು ಮಹತ್ವದ ಗುಣ. ತಪ್ಪನ್ನು ಒಪ್ಪಿಕೊಳ್ಳುವುದು ಸೋಲು ಅಲ್ಲ; ಅದು ವ್ಯಕ್ತಿತ್ವದ ಗೆಲುವು. ನಾವು ಯಾರಿಗಾದರೂ ನೋವು ಕೊಟ್ಟಿದ್ದರೆ ಅದನ್ನು ಸರಿಪಡಿಸಲು ಪ್ರಯತ್ನಿಸುವುದೇ ನಿಜವಾದ ಮಾನವೀಯತೆ. ಏಕೆಂದರೆ ದೈವವೂ ಪಶ್ಚಾತ್ತಾಪದ ಹೃದಯವನ್ನು ಪ್ರೀತಿಸುತ್ತದೆ.

ನಮ್ಮ ಬದುಕಿನ ನಿಜವಾದ ಸಂಪತ್ತು ಬ್ಯಾಂಕ್ ಖಾತೆಯಲ್ಲಿರುವ ಹಣವಲ್ಲ; ನಮ್ಮ ಬಗ್ಗೆ ಇನ್ನೊಬ್ಬರು ಮನಸಾರೆ ಹೇಳುವ ಒಳ್ಳೆಯ ಮಾತು. ನಮ್ಮನ್ನು ನೆನೆದು ಯಾರಾದರೂ ನಗುತ್ತಿದ್ದರೆ, ನಮ್ಮಿಂದ ಅವರಿಗೆ ನೆಮ್ಮದಿ ಸಿಕ್ಕಿದೆ ಎಂದರೆ, ಅದಕ್ಕಿಂತ ದೊಡ್ಡ ಸಾಧನೆ ಮತ್ತೊಂದಿಲ್ಲ. ಅದೇ ಮನುಷ್ಯನ ಬದುಕಿನ ನಿಜವಾದ ಯಶಸ್ಸು.

ಇಂದು ನಾವು ಬಿತ್ತುವ ಪ್ರೀತಿ, ನಾಳೆ ನಮ್ಮ ಮಕ್ಕಳಿಗೆ ಆಶೀರ್ವಾದವಾಗಬಹುದು. ಇಂದು ನಾವು ಮಾಡುವ ಅನ್ಯಾಯ, ನಾಳೆ ನಮ್ಮದೇ ಕುಟುಂಬದ ಪರೀಕ್ಷೆಯಾಗಬಹುದು. ಆದ್ದರಿಂದ ಬದುಕಿನಲ್ಲಿ ಪ್ರತಿಯೊಂದು ಹೆಜ್ಜೆಯನ್ನೂ ನ್ಯಾಯ, ಕರುಣೆ ಮತ್ತು ಪ್ರಾಮಾಣಿಕತೆಯೊಂದಿಗೆ ಇಡಬೇಕು. ಮತ್ತೊಬ್ಬರ ಬದುಕಿಗೆ ಬೆಳಕಾಗುವ ವ್ಯಕ್ತಿಯೇ ನಿಜವಾದ ಶ್ರೀಮಂತ.

ಯಾರನ್ನೂ ದ್ವೇಷಿಸದೆ, ಯಾರ ನೆಮ್ಮದಿಯನ್ನೂ ಕಸಿಯದೆ, ಸಾಧ್ಯವಾದಷ್ಟು ಸಹಾಯ ಮಾಡುತ್ತಾ ಬದುಕಿದರೆ ಮನಸ್ಸು ಹಗುರವಾಗಿರುತ್ತದೆ. ಅಂತಹ ಮನಸ್ಸಿಗೆ ಭಯ ಇರುವುದಿಲ್ಲ. ಅಂತಹ ಜೀವನಕ್ಕೆ ಮುಖವಾಡ ಬೇಕಾಗುವುದಿಲ್ಲ. ಅಂತಹ ವ್ಯಕ್ತಿಗೆ ದೈವದ ಕೃಪೆ ಸದಾ ಜೊತೆಯಾಗಿರುತ್ತದೆ.

ಕೊನೆಗೆ, ನೆನಪಿಡಬೇಕಾದ ಒಂದು ಸತ್ಯ ಜೀವನದಲ್ಲಿ ಎಲ್ಲವನ್ನೂ ಕಳೆದುಕೊಂಡರೂ ಮತ್ತೆ ಗಳಿಸಬಹುದು. ಆದರೆ ಮತ್ತೊಬ್ಬರ ಕಣ್ಣೀರಿನ ಮೇಲೆ ಕಟ್ಟಿದ ಸುಖವನ್ನು ಎಂದಿಗೂ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಮತ್ತೊಬ್ಬರ ನೆಮ್ಮದಿಯನ್ನು ಕಾಪಾಡುವುದು ನಮ್ಮ ಕರ್ತವ್ಯ. ಏಕೆಂದರೆ ಇನ್ನೊಬ್ಬರ ನೆಮ್ಮದಿಯನ್ನು ಕಸಿದುಕೊಂಡವರು, ತಮ್ಮ ಜೀವನದಲ್ಲಿ ನಿಜವಾದ ನೆಮ್ಮದಿಯನ್ನು ಎಂದಿಗೂ ಅನುಭವಿಸಲಾರರು. ಇದು ಕೇವಲ ಒಂದು ಮಾತಲ್ಲ; ಕಾಲ ಪರೀಕ್ಷಿಸಿದ ದೈವದ ನುಡಿ. ಒಳ್ಳೆಯತನಕ್ಕೆ ತಡವಾಗಬಹುದು, ಆದರೆ ಅದರ ಗೆಲುವು ಶಾಶ್ವತ. ಅನ್ಯಾಯಕ್ಕೆ ಹೊಳಪು ಇರಬಹುದು, ಆದರೆ ಅದರ ಅಂತ್ಯ ಕತ್ತಲೆಯಲ್ಲೇ. ಹೀಗಾಗಿ, ನಮ್ಮ ಬದುಕು ಮತ್ತೊಬ್ಬರ ಮುಖದಲ್ಲಿ ನಗುವಾಗಲಿ, ಕಣ್ಣೀರಾಗದಿರಲಿ. ಅದುವೇ ಮನುಷ್ಯನ ನಿಜವಾದ ಧರ್ಮ, ಅದುವೇ ಜೀವನದ ಸೌಂದರ್ಯ, ಅದುವೇ ದೈವದ ನುಡಿ.

# 29ರಂದು ಉದ್ಯಮಶೀಲತಾ ತಿಳುವಳಿಕೆ ಶಿಬಿರ

**ರಾಮನಗರ:** ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಾಯೋಜಕತ್ವದಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲಾ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್) ವತಿಯಿಂದ ಸ್ವಂತ ಉದ್ಯೋಗ ಸ್ಥಾಪಿಸಲು ಬಯಸುವ ಮಹಿಳೆಯರಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಜು.29 ರಂದು ರಾಮನಗರ ತಾಲ್ಲೂಕಿನ ಮಿನಿ ವಿಧಾನಸೌಧದಲ್ಲಿರುವ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲೆಯ ಆಸಕ್ತ ಮಹಿಳಾ ಮಹಿಳಾ ಉದ್ಯಮಶೀಲರಿಗೆ ಅನುಕೂಲವಾಗಲು ಸ್ವಂತ ಉದ್ಯಮ ಸ್ಥಾಪಿಸಲು ಅನುಸರಿಸುವ ಕ್ರಮಗಳು, ಸರ್ಕಾರದ ಸ್ವಂತ ಉದ್ಯೋಗ ಯೋಜನೆಗಳು, ಬ್ಯಾಂಕಿನ ವ್ಯವಹಾರದ ಕುರಿತು ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಆಯೋಜಿಸಲಾಗಿದೆ. ಅಭ್ಯರ್ಥಿಗಳು 18 ರಿಂದ 40 ವರ್ಷದೊಳಗಿರಬೇಕು ಹಾಗೂ ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು. ಎಲ್ಲಾ ವರ್ಗದ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಆಸಕ್ತ ಮಹಿಳೆಯರು ಜು. 28ರ ವರೆಗೆ ಹೆಸರು ನೋಂದಾಯಿಸಬಹುದು.

ಹೆಚ್ಚಿನ ಮಾಹಿತಿಗೆ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ನಂ. 208, ಕಂದಾಯ ಭವನ, ಬಿ.ಎಂ. ರಸ್ತೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ-562159 ಅಥವಾ 7090299843 ಅನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಸಿಡಾಕ್‌ನ ಸಲಹೆಗಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿನ್ನದೇ ಬರಹ, ನಿನ್ನದೇ ಜಯ



| ಡಾ.ಈರಪ್ಪ ಲಕ್ಷ್ಮಣ ಘಸ್ತಿ.

ಪರೀಕ್ಷೆ ಹತ್ತಿರ ಬಂದಾಗ ಓಡುವ ಮನಸ್ಸಿಗೆ ನೆಮ್ಮದಿ ಕೊಡುವ ಶಕ್ತಿ ಒಂದು ಪುಟ್ಟ ಟಿಪ್ಪಣಿ ಪುಸ್ತಕಕ್ಕಿದೆ. ಅದರಲ್ಲಿ ಇರುವುದು ಬೇರೆಯವರ ಮಾತಲ್ಲ, ನೀನು ಅರ್ಥ ಮಾಡಿಕೊಂಡ ವಿಷಯದ ನಿನ್ನದೇ ರೂಪ. "ನಿನ್ನದೇ ಟಿಪ್ಪಣಿ ನಿನ್ನದೇ ಗೆಲುವು" – ಇದು ಕೇವಲ ಅಭ್ಯಾಸವಲ್ಲ, ವಿದ್ಯಾರ್ಥಿ ಜೀವನದ ಅತ್ಯಂತ ಪರಿಣಾಮಕಾರಿ ಮಂತ್ರ.

ಪಾಠ ಮುಗಿದ ತಕ್ಷಣ ಪುಸ್ತಕವನ್ನು ಪಕ್ಕಿಡು. ನಿನ್ನ ಮನಸ್ಸಿನಲ್ಲಿ ಉಳಿದ ಮುಖ್ಯ ಅಂಶಗಳನ್ನು ನಿನ್ನದೇ ಸರಳ ಭಾಷೆಯಲ್ಲಿ ಬರೆ. ದೊಡ್ಡ ವಾಕ್ಯಗಳನ್ನು ಚಿಕ್ಕದಾಗಿಸು, ಕಠಿಣ ಪದಗಳಿಗೆ ನಿನ್ನದೇ ಉದಾಹರಣೆ ಕೊಡು. ಅಗತ್ಯವಿದ್ದರೆ ಬಣ್ಣ, ಅಡಿಗೆರೆ, ಸಣ್ಣ ಚಿತ್ರಗಳ ಮೂಲಕ ವಿಷಯಕ್ಕೆ ಜೀವ ತುಂಬು. ಟಿಪ್ಪಣಿ ಎಂದರೆ ಎಲ್ಲವನ್ನೂ ಬರೆಯುವುದಲ್ಲ. ಅದು ವಿಷಯದ ಎಲುಬು. ಆದ್ದರಿಂದ ಅದು ಚೊಕ್ಕವಾಗಿರಬೇಕು, ಒಮ್ಮೆ ನೋಡಿದಾಗಲೇ ಮತ್ತೆ ನೆನಪಾಗುವಂತಿರಬೇಕು.

ಬರವಣಿಗೆಯ ಹಿಂದೆ ವಿಜ್ಞಾನವೂ ಇದೆ. ಕೇವಲ ಓದಿದಾಗ ಮಾಹಿತಿ ಮೇಲ್ನೋಟಕ್ಕೆ ಹಾದುಹೋಗುತ್ತದೆ. ಆದರೆ ನೀನು ಸ್ವತಃ ಬರೆದಾಗ ಕಣ್ಣು, ಕೈ ಮತ್ತು ಮೆದುಳು ಮೂರೂ ಒಟ್ಟಿಗೆ ಕೆಲಸ ಮಾಡುತ್ತವೆ. ಇದರಿಂದ ಮಾಹಿತಿ ನೆನಪಿನಲ್ಲಿ ಆಳವಾಗಿ ಬೇರೂರುತ್ತದೆ. ನಿನ್ನ



ಕೈಯಿಂದ ಮೂಡಿದ ಪ್ರತಿಯೊಂದು ಸಾಲು ದೀರ್ಘಕಾಲದ ನೆನಪನ್ನು ಸೃಷ್ಟಿಸುತ್ತದೆ. ಪರೀಕ್ಷೆಗೆ ಮುನ್ನ ಪರಿಷ್ಕರಿಸುವುದೂ ಸುಲಭವಾಗುತ್ತದೆ.

ಈ ಅಭ್ಯಾಸ ವಿದ್ಯಾರ್ಥಿಯಲ್ಲಿ ಏಕಾಗ್ರತೆ ಮತ್ತು ವಿಶ್ಲೇಷಣಾ ಶಕ್ತಿಯನ್ನು ಬೆಳೆಸುತ್ತದೆ. ಯಾವುದು ಮುಖ್ಯ ಎಂದು ಆಯ್ಕೆ ಮಾಡುವ ಸಾಮರ್ಥ್ಯ ಬರುತ್ತದೆ. ವಿಷಯವನ್ನು ಆಳವಾಗಿ ಅರ್ಥ ಮಾಡಿಕೊಳ್ಳುವುದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಇತರರ ನೋಟ್ಸ್ ಕನ್ನಡಿಯಂತೆ ಮಾರ್ಗ ತೋರಬಹುದು, ಆದರೆ ನಿನ್ನ ಟಿಪ್ಪಣಿ ನಿನ್ನದೇ ಕಣ್ಣು. ಅದರಲ್ಲಿ ನಿನ್ನ ಯೋಚನೆ, ನಿನ್ನ ಅನುಮಾನ ಮತ್ತು ನಿನ್ನ ಕಲಿಕೆಯ ಗುರುತು ಇರುತ್ತದೆ.

ಆದ್ದರಿಂದ ಇಂದೇ ಆರಂಭಿಸು. ಪ್ರತಿ ಅಧ್ಯಾಯದ ನಂತರ ಒಂದು ಪುಟ, ನಿನ್ನದೇ ಅಕ್ಷರದಲ್ಲಿ. ನೆನಪಿಡು, ಯಶಸ್ಸು ದಪ್ಪ ಪುಸ್ತಕಗಳ ರಾಶಿಯಲ್ಲಿ ಇಲ್ಲ. ಅದು ನಿನ್ನ ಪೆನ್ನಿನ ತುದಿಯಲ್ಲಿ, ನಿನ್ನದೇ ಬರಹದಲ್ಲಿ ಹುಟ್ಟುತ್ತದೆ.

# ನೂಲಿನಲ್ಲಿ ಬರೆದ ಗೀಚುಚಿತ್ರ


ಸ್ಫೂರ್ತಿ ಸುಧೆ - 80



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ನಗರದ ಗೋಡೆಗಳ ಮೇಲಿನ ಬಂಡಾಯದ ಬಣ್ಣಗಳು ಸೀರೆಯ ಸೆರಗಿಗೆ ಇಳಿದು ಬಂದರೆ? ಆ ಅಸಾಧ್ಯವನ್ನು ಸಾಧಿಸಿದ ಕಲಾತಪಸ್ವಿ ಶ್ರೀ ಖೇಮ್ ರಾಜ್ ಸುಂದ್ರಿಯಾಲ್. ಕೈಮಗ್ಗ ಮತ್ತು ಗೀಚುಚಿತ್ರವನ್ನು ಒಂದಾಗಿಸಿದ ಸಾಧನೆಗೆ 2026ರ ಪದ್ಮಶ್ರೀ ಗೌರವ ಸಂದಿದೆ.

ತಲೆಮಾರುಗಳಿಂದ ನೂಲು ಹಿಡಿದ ಕೈಗಳಿಗೆ ಇವರು ಹೊಸ ಕನಸು ಕೊಟ್ಟರು. ಸಾಂಪ್ರದಾಯಿಕ ಮಗ್ಗದ ಮೇಲೆ ಸಮಕಾಲೀನ ಗೀಚುಚಿತ್ರದ ರೇಖೆಗಳನ್ನು ಹೆಣೆದ ಮೊದಲಿಗರು ಇವರೇ. ಬೀದಿಯ ಪ್ರತಿಭಟನೆ, ನಗರದ ಕಥೆ, ಯುವ ಮನದ ಕೂಗನ್ನು ದಾರದಲ್ಲಿ ಬರೆದರು. ಹೀಗೆ ಮರೆಯಾಗುತ್ತಿದ್ದ ಕೈಮಗ್ಗಕ್ಕೆ ಯುವ ಪೀಳಿಗೆಯ ಮನಸ್ಸನ್ನು ಸೆಳೆದರು. ನಶಿಸುತ್ತಿದ್ದ



ನೂರಾರು ನೇಕಾರ ಕುಟುಂಬಗಳಿಗೆ ಹೊಸ ಮಾರುಕಟ್ಟೆ ಮತ್ತು ಹೊಸ ಭರವಸೆ ನೀಡಿದರು.

ಇವರ ಪ್ರತಿಯೊಂದು ಸೃಷ್ಟಿಯೂ ಕೇವಲ ಬಟ್ಟೆಯಲ್ಲ. ಅದು ನೂಲಿನಲ್ಲಿ ಹೆಣೆದ ಸಾಮಾಜಿಕ ಕಥನ. ಪರಂಪರೆಯ ಎಳೆ ಮತ್ತು ಆಧುನಿಕತೆಯ ಬಣ್ಣ ಒಂದಾದಾಗ ಹುಟ್ಟುವ ಮಾಂತ್ರಿಕತೆಗೆ ಇವರ ಮಗ್ಗವೇ ಸಾಕ್ಷಿ. ಗೋಡೆಗಳ ಗದ್ದಲವನ್ನು ನೇಯ್ಗೆಯ ಮೌನಕ್ಕೆ ಇಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಪದ್ಮಶ್ರೀ ಒಬ್ಬ ವ್ಯಕ್ತಿಗೆ ಸಂದ ಸನ್ಮಾನವಲ್ಲ. ಮಗ್ಗದ ಮನೆಯಲ್ಲಿ ಕ್ರಾಂತಿಯ ಬೀಜ ಬಿತ್ತಿ, "ಕೈಮಗ್ಗ ಹಳೆಯದಲ್ಲ, ಅದು ಎಂದೆಂದಿಗೂ ಹೊಸತು" ಎಂದು ಜಗತ್ತಿಗೆ ತೋರಿಸಿದ ಕಲಾವಿದನಿಗೆ ಸಂದ ಗೌರವ. ಶ್ರೀ ಖೇಮ್ ರಾಜ್ ಸುಂದ್ರಿಯಾಲ್ ಅವರ ನೂಲುಗಳು ಹೆಣೆದದ್ದು ಭಾರತದ ನೇಯ್ಗೆ ಪರಂಪರೆಯ ಭವಿಷ್ಯದ ನಕಾಶೆಯನ್ನೇ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,